**ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು**

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



**ಏಪ್ರಿಲ್ ೪ನೇ ವಾರ**

20-04-2026 TO 25-04-2026

# ಜಪಾನ್: 7.5 ತೀವ್ರತೆಯ ಭೂಕಂಪ

- ಪಿಂಚಣಿ ಕ್ಷೇತ್ರ: ಶೇ 100ರಷ್ಟು ಎಫ್‌ಡಿಐ
- ವಿತ್ತೀಯ ಕೊರತೆ ಹೆಚ್ಚಳ ಸಾಧ್ಯತೆ
- ಆನ್‌ಲೈನ್ ಆಟಗಳಿಗೆ ನಿಯಮ
- ಆರು ಕ್ರೀಡಾಂಗಣಗಳಿಗೆ ಎನ್‌ಜಿಟಿ ನೋಟಿಸ್

## ❖ ಸತತ ಎರಡನೇ ದಿನವೂ ಹಡಗು ಸಂಚಾರ ಸ್ಥಗಿತಗೊಳಿಸಿದ ಇರಾನ್: ಹೊರ್ಮುಜ್: ನಿರ್ಬಂಧ ಇನ್ನಷ್ಟು ಬಿಗಿ

**ಸಂದರ್ಭ: ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರದ ಮೇಲೆ ಇರಾನ್ ವಿಧಿಸಿರುವ ನಿರ್ಬಂಧ ಭಾನುವಾರವೂ ಮುಂದುವರಿಯಿತು. ಜಲಸಂಧಿ ದಾಟಲು ಯತ್ನಿಸಿದ ಎರಡು ಹಡಗುಗಳಿಗೆ ಎಚ್ಚರಿಕೆ ನೀಡಿ ವಾಪಸ್ ಕಳುಹಿಸಲಾಗಿದೆ.**

- 'ಇರಾನ್ ಬಂದರಿನ ಮೇಲೆ ಅಮೆರಿಕ ಹೇರಿರುವ ದಿಗ್ಬಂಧನ ತೆರವು ಗೊಳಿಸುವವರೆಗೆ ಹೊರ್ಮುಜ್‌ನಲ್ಲಿ ನಿರ್ಬಂಧ ಮುಂದುವರಿಯಲಿದೆ' ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ಹೇಳಿದೆ. ಈ ಬೆಳವಣಿಗೆಯಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ದರ ಮತ್ತೆ ಏರಿಕೆಯಾಗುವ ಆತಂಕ ಮೂಡಿದೆ.
- 'ನಮ್ಮ ಹಡಗುಗಳ ಸಂಚಾರ ಸಾಧ್ಯವಾಗದಿದ್ದಾಗ ಇತರ ದೇಶಗಳ ಹಡಗುಗಳು ಹೊರ್ಮುಜ್ ಜಲಸಂಧಿ ಮೂಲಕ ಹಾದುಹೋಗುವುದು ಅಸಾಧ್ಯ' ಎಂದು ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಾಖರ್ ಖಾಲೀಬಾನ್ ಸರ್ಕಾರಿ ಸುದ್ದಿವಾಹಿನಿಗೆ ತಿಳಿಸಿದ್ದಾರೆ.
- 'ಅನುಮತಿ ಪಡೆಯದ ಜಲಸಂಧಿ ಮೂಲಕ ಹಾದುಹೋಗುವ ಯಾವುದೇ ಪ್ರಯತ್ನವನ್ನು 'ಶತ್ರುಗಳೊಂದಿಗಿನ ಸಹಕಾರ'ವೆಂದೇ ಪರಿಗಣಿಸಲಾಗುತ್ತದೆ.ಅಂತಹ ಹಡಗುಗಳನ್ನು ಗುರಿಯಾಗಿಸ ಲಾಗುವುದು' ಎಂದು ಐಆರ್‌ಜಿಸಿ ಎಚ್ಚರಿಸಿದೆ.
- ಹೊರ್ಮುಜ್ ಮೂಲಕ ಸಾಗಲು ಯತ್ನಿಸಿದ ಭಾರತದ ಧ್ವಜ ಹೊಂದಿದ್ದ ಎರಡು ಹಡಗುಗಳ ಮೇಲೆ ಇರಾನ್ ಗುಂಡಿನ ದಾಳಿ ನಡೆಸಿತ್ತು. ಅದರ ಬೆನ್ನಲ್ಲೇ ಈ ಜಲಸಂಧಿಯಲ್ಲಿ ಹಡಗುಗಳ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ.

ar IAS KAS Academy

ರಸ್ತೆ ಸುರಕ್ಷತೆ ಕೂಡ ಜೀವಿಸುವ ಹಕ್ಕಿನ ಭಾಗ • ಸುರಕ್ಷತೆಗೆ ಮಾರ್ಗಸೂಚಿ ಪ್ರಕಟಿಸಿದ ಸುಪ್ರೀಂ ಕೋರ್ಟ್

### 'ಹೆದ್ದಾರಿಗಳು ಸಾವಿನ ದಾರಿಗಳಾಗಬಾರದು'

ನವದೆಹಲಿ (ಪಿಟಿಐ): 'ಆಡಳಿತದ ಆಲಸ್ಯ ಧೋರಣೆ, ಮೂಲಸೌಕರ್ಯ ಕೊರತೆಯ ಕಾರಣಕ್ಕಾಗಿ ದೇಶದ ಹೆದ್ದಾರಿಗಳು, ಎಕ್ಸ್‌ಪ್ರೆಸ್‌ವೇಗಳು ಸಾವಿನ ದಾರಿಗಳಾಗಬಾರದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ. ರಸ್ತೆ ಸುರಕ್ಷತೆಗಾಗಿ ದೇಶದಾದ್ಯಂತ ಜಾರಿ ಮಾಡುವಂತೆ ನ್ಯಾಯಾಲಯವೇ ಮಾರ್ಗಸೂಚಿಯನ್ನೂ ರೂಪಿಸಿದೆ.

'ಯಾರೋ ಒಬ್ಬರು ಇನ್ನೊಬ್ಬರ ಹತ್ಯೆ ಮಾಡಿದಾಗ ಮಾತ್ರವೇ 'ಜೀವಿಸುವ ಹಕ್ಕು' ಉಲ್ಲಂಘನೆಯಾಗುವುದಿಲ್ಲ. ಜನರು ಸುರಕ್ಷಿತವಾಗಿ ಜೀವಿಸುವ ವಾತಾವರಣ ಸೃಷ್ಟಿಸಬೇಕು ಎನ್ನುವುದೂ ಈ ಹಕ್ಕಿನ ಭಾಗವೇ ಆಗಿದೆ. ಈ ಜವಾಬ್ದಾರಿ ಸರ್ಕಾರಗಳ ಮೇಲಿದೆ' ಎಂದು ಜೆ.ಕೆ. ಮಾಹೇಶ್ವರಿ ಮತ್ತು ಎ.ಎಸ್. ಚಂದೂರ್ಕರ್ ಅವರ ಪೀಠ ಅಭಿಪ್ರಾಯಪಟ್ಟಿದೆ.

'ಭಾರತದಲ್ಲಿನ ಒಟ್ಟು ರಸ್ತೆಯ ಸಂಪರ್ಕ ವಿಸ್ತೀರ್ಣದಲ್ಲಿ ರಾಷ್ಟ್ರೀಯ ಹೆದ್ದಾರಿಯ ಪ್ರಮಾಣವು ಶೇ 2ರಷ್ಟು ಮಾತ್ರ. ಆದರೆ, ದೇಶದಲ್ಲಿ ರಸ್ತೆ ಅಪಘಾತದಲ್ಲಿ ಸಂಭವಿಸುವ ಒಟ್ಟು ಸಾವುಗಳ ಸಂಖ್ಯೆಯಲ್ಲಿ ಶೇ 30ರಷ್ಟು ಇಂಥ ರಾಷ್ಟ್ರೀಯ ಹೆದ್ದಾರಿಗಳಲ್ಲೇ ಸಂಭವಿಸುತ್ತಿವೆ' ಎಂದು ಪೀಠ ಹೇಳಿದೆ.

ರಸ್ತೆ ಮತ್ತು ಸಾರಿಗೆ ಸಚಿವಾಲಯ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಮತ್ತು ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಿಗೆ ಮಾರ್ಗಸೂಚಿಗಳನ್ನು ನೀಡಿ ಇದೇ 13ರಂದು ಪೀಠ ಆದೇಶಿಸಿದೆ.

'ಹೆದ್ದಾರಿಗಳಲ್ಲಿ ಅಕ್ರಮವಾಗಿ ವಾಹನ ನಿಲ್ಲಿಸುವುದು ಮತ್ತು ಬ್ಲಾಕ್‌ಸ್ಪಾಟ್‌ಗಳಂಥ ಸಮಸ್ಯೆಗಳನ್ನು ಸರ್ಕಾರಗಳು ಪರಿಹರಿಸಬಹುದು. ಇಂಥ ಪರಿಹರಿಸಬಹುದಾದ ಸಮಸ್ಯೆಗಳಿಂದ ಒಂದು ಸಾವು ಸಂಭವಿಸುವುದೂ ಸರ್ಕಾರದ ವೈಫಲ್ಯ. ನಾವು ನೀಡಿದ ಮಾರ್ಗಸೂಚಿಗಳು ಪಾಲನೆ ಆಗುತ್ತಿವೆಯೇ ಇಲ್ಲವೇ ಎನ್ನುವ ಬಗ್ಗೆ ಆದೇಶ ಬಂದ 75 ದಿನಗಳ ಒಳಗಾಗಿ ಎಲ್ಲ ರಾಜ್ಯಗಳಿಂದ ದತ್ತಾಂಶಗಳನ್ನು ಸಂಗ್ರಹಿಸಿ ನಮಗೆ ಸ್ಥಿತಿಗತಿ ವರದಿ ನೀಡಬೇಕು' ಎಂದು ಹೆದ್ದಾರಿ ಪ್ರಾಧಿಕಾರಕ್ಕೆ ಪೀಠ ಸೂಚಿಸಿದೆ.

**ಪ್ರಕರಣವೇನು?:** ರಾಜಸ್ಥಾನದ ಫಲೋದಿ ಮತ್ತು ತೆಲಂಗಾಣದ ರಂಗಾರೆಡ್ಡಿಯಲ್ಲಿ 2025ರ ನವೆಂಬರ್ 2 ಮತ್ತು 3ರಂದು ನಡೆದ ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ 34 ಮಂದಿ ಮೃತಪಟ್ಟಿದ್ದರು. ಮೂಲಸೌಕರ್ಯಗಳ ಕೊರತೆ ಕಾರಣಕ್ಕೆ ಈ ಅಪಘಾತಗಳು ಸಂಭವಿಸಿದ್ದವು. ಈ ಕುರಿತು ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ.

**ಮಾರ್ಗಸೂಚಿಗಳೇನು?**

- ಹೆದ್ದಾರಿಗಳ ಪಕ್ಕದಲ್ಲಿ ಹೊಸ ಡಾಬಾ ಅಥವಾ ಇನ್ನ್ಯಾವುದೇ ತಿನಿಸುಗಳ ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ ನಿರ್ಬಂಧ ಹೇರಬೇಕು. ಈಗಾಗಲೇ ಇರುವ ಇಂಥ ಸಂಕೀರ್ಣಗಳನ್ನು ಮುಚ್ಚಬೇಕು. ನಮ್ಮ ಆದೇಶದ 60 ದಿನಗಳ ಒಳಗಾಗಿ ಹೆದ್ದಾರಿ ಪಕ್ಕದಲ್ಲಿರುವ ಎಲ್ಲ ಅಕ್ರಮ ಕಟ್ಟಡಗಳನ್ನು ಜಿಲ್ಲಾಧಿಕಾರಿ ನೆಲಸಮ ಮಾಡಬೇಕು
- ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಥವಾ ಲೋಕೋಪಯೋಗಿ ಇಲಾಖೆಯಿಂದ ಅನುಮತಿ ಪಡೆದುಕೊಳ್ಳದೇ ಹೆದ್ದಾರಿ ಸುರಕ್ಷತಾ ವಲಯದ ಒಳಗೆ ವಾಣಿಜ್ಯ ಉದ್ದೇಶಕ್ಕೆ ನೀಡಲಾಗಿರುವ ಎಲ್ಲ ಪರವಾನಗಿ ಮತ್ತು ಎನ್‌ಒಸಿಗಳನ್ನು ಯಾವುದೇ ಇಲಾಖೆ, ಅಧಿಕಾರಿಗಳು ಅಥವಾ ಸ್ಥಳೀಯ ಸಂಸ್ಥೆಗಳು ನವೀಕರಿಸುವಂತಿಲ್ಲ. ಇಂಥ ಪರವಾನಗಿಗಳನ್ನು 30 ದಿನಗಳ ಒಳಗಾಗಿ ಪರಿಶೀಲಿಸಿ, ಅಗತ್ಯ ಕ್ರಮ ತೆಗೆದುಕೊಳ್ಳಬೇಕು
- ಭಾರಿ ವಾಹನ ಅಥವಾ ವಾಣಿಜ್ಯ ವಾಹನಗಳು ಯಾವುದೇ ರಾಷ್ಟ್ರೀಯ ಹೆದ್ದಾರಿಗಳ ಪಕ್ಕದಲ್ಲಿ ನಿಲುಗಡೆ ಮಾಡುವಂತಿಲ್ಲ. ನಿಗದಿ ಮಾಡಿರುವ ನಿಲುಗಡೆ ಜಾಗದಲ್ಲಿಯೇ (ಲೇ ಬೇಗಳಲ್ಲಿ) ವಾಹನಗಳನ್ನು ನಿಲ್ಲಿಸಬೇಕು
- ಆಧುನಿಕ ಸಂಚಾರ ನಿರ್ವಹಣಾ ವ್ಯವಸ್ಥೆ (ಎಟಿಎಂಎಸ್) ಮೂಲಕ ರಾಜ್ಯ ಪೊಲೀಸರಿಗೆ ಎಲ್ಲ ಮಾಹಿತಿಗಳು ದೊರೆಯಬೇಕು. ಜಿಪಿಎಸ್, ಛಾಯಾಚಿತ್ರಗಳ ಸಾಕ್ಷ್ಯ ಮತ್ತು ಇ–ಚಲನ್ ವ್ಯವಸ್ಥೆ ಇರಬೇಕು
- ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವ ಜಿಲ್ಲೆಗಳಲ್ಲಿ ನಮ್ಮ ಆದೇಶದ 15 ದಿನಗಳ ಒಳಗಾಗಿ ಆಯಾ ಜಿಲ್ಲಾಧಿಕಾರಿ ಹೆದ್ದಾರಿ ಸುರಕ್ಷತಾ ಕಾರ್ಯಪಡೆಯನ್ನು ರಚಿಸಬೇಕು. ಈ ಪಡೆಯಲ್ಲಿ ಜಿಲ್ಲಾಡಳಿತದ ಒಬ್ಬ ಅಧಿಕಾರಿ, ಪೊಲೀಸ್ ಅಧಿಕಾರಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಒಬ್ಬ ಅಧಿಕಾರಿ, ಲೋಕೋಪಯೋಗಿ ಇಲಾಖೆಯ ಅಧಿಕಾರಿ ಮತ್ತು ಸ್ಥಳೀಯ ಸಂಸ್ಥೆಗಳ ಒಬ್ಬ ಅಧಿಕಾರಿ ಇರಬೇಕು
- ಹೆದ್ದಾರಿಗಳಲ್ಲಿ ಅಕ್ರಮವಾಗಿ ವಾಹನ ನಿಲುಗಡೆ ಮಾಡುವ ಬಗ್ಗೆ ನಿಗಾ ಇರಿಸಲು ನಿರಂತರ ಗಸ್ತು ತಿರುಗುವ, ಕಣ್ಗಾವಲು ಇರಿಸುವ ವ್ಯವಸ್ಥೆ ಮಾಡಬೇಕು. ಹೆದ್ದಾರಿಗಳಲ್ಲಿ ಅಲ್ಲಲ್ಲಿ ಕ್ಯಾಮೆರಾ, ವೇಗ ಪತ್ತೆ ವ್ಯವಸ್ಥೆ, ತುರ್ತು ಪ್ರತಿಕ್ರಿಯೆ ವ್ಯವಸ್ಥೆ, ಟ್ರಕ್‌ಗಳ ನಿಲುಗಡೆಗಾಗಿ ಜಾಗ ನಿಗದಿ, ಅಪಘಾತ ಸಂಭವಿಸುವ ಬ್ಲಾಕ್‌ಸ್ಪಾಟ್ ಗುರುತಿಸುವಿಕೆ, ತುರ್ತು ಸಂದರ್ಭದಲ್ಲಿ ವಿವಿಧ ಸಂಸ್ಥೆಗಳ ಸಹಕಾರ, ರಸ್ತೆ ಸುರಕ್ಷತಾ ಸಮಿತಿಗಳ ರಚನೆ, ಅಪಘಾತಗಳ ವರದಿ ವ್ಯವಸ್ಥೆಗಳು ಇರಬೇಕು

**ಅನುದಾನ ಕೊರತೆ ಅಥವಾ ಯಾವುದೇ ಆಡಳಿತಾತ್ಮಕ ಸಮಸ್ಯೆಗಳು ಜನರ ಜೀವಕ್ಕೆ ಕುತ್ತು ತರಬಾರದು. 60 ದಿನಗಳೊಳಗೆ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು ಸಿದ್ಧಪಡಿಸಬೇಕು**
**ಸುಪ್ರೀಂಕೋರ್ಟ್ ನ್ಯಾಯಪೀಠ**

- ಪುತ್ರಿ ಸಾಧಿ, ಖ್ಯಾತ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಅವರಿಂದ ಪ್ರೇರಣೆಗೊಂಡು ಅರ್ಥಶಾಸ್ತ್ರ ವಿಷಯ ಅಧ್ಯಯನ ಮಾಡಿದ್ದಾರೆ.
- ಸಾಮಾಜಿಕ ಚಟುವಟಿಕೆಗಳಲ್ಲೂ ಸಕ್ರಿಯವಾಗಿರುವ ಸಾಧಿ ಅಪೌಷ್ಟಿಕತೆಯಿಂದ ಬಳಲುವ ಮಕ್ಕಳಿಗೆ ನೆರವಾಗಲು ಕಿಟ್ರೊ ಎಂಬ ಸಂಸ್ಥೆಯೊಂದಿಗೆ ಕೈಜೋಡಿಸಿದ್ದಾರೆ. ಮಕ್ಕಳ ಆರೋಗ್ಯ ಕಾಳಜಿಗೆ ಆರ್ಥಿಕ ಸಂಪನ್ಮೂಲ ಕ್ರೋಡೀಕರಿಸಲು ನೆರವಾಗುತ್ತಿದ್ದಾರೆ.

## ❖ ಪಿಂಚಣಿ ಕ್ಷೇತ್ರ: ಶೇ 100ರಷ್ಟು ಎಫ್‌ಡಿಐ ?

**ಸಂದರ್ಭ: ಪಿಂಚಣಿ ವಲಯದಲ್ಲಿ ವಿದೇಶಿ ನೇರ ಹೂಡಿಕೆಯನ್ನು (ಎಫ್‌ಡಿಐ) ಕೇಂದ್ರ ಸರ್ಕಾರವು ಶೇಕಡ 100ಕ್ಕೆ ಹೆಚ್ಚಿಸುವ ಸಾಧ್ಯತೆ ಇದೆ. ಇದಕ್ಕೆ ಸಂಬಂಧಿಸಿದ ಮಸೂದೆಯೊಂದನ್ನು ಸಂಸತ್ತಿನ ಮುಂದಿನ ಅಧಿವೇಶನದಲ್ಲಿ ಮಂಡಿಸುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.**

- ವಿಮಾ ವಲಯದಲ್ಲಿ ಶೇ 100ರು ಎಫ್‌ಡಿಐಗೆ ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಮಸೂದೆಗೆ ಸಂಸತ್ತು ಕಳೆದ ವರ್ಷ ಒಪ್ಪಿಗೆ ನೀಡಿದೆ.
- ಪಿಂಚಣಿ ವಲಯದಲ್ಲಿ ಎಫ್‌ಡಿಐ ಮಿತಿಯನ್ನು ಶೇ 100ಕ್ಕೆ ಹೆಚ್ಚಿಸುವ ಅವಕಾಶ ಕಲ್ಪಿಸಲು 'ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ - 2013'ಕ್ಕೆ ಅಗತ್ಯ ತಿದ್ದುಪಡಿಗಳನ್ನು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಅಥವಾ ಚಳಿಗಾಲದ ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಇದೆ ಈಗ ಪಿಂಚಣಿ ವಲಯದಲ್ಲಿ ಶೇ 49ರಷ್ಟು ಎಫ್‌ಡಿಐಗೆ ಅವಕಾಶ ಇದೆ
- ಕಾಯ್ದೆಗೆ ತಿನ್ನುವಡಿ ತರುವ ಮಸೂದೆಯು ಎನ್‌ಪಿಎಸ್ ಟ್ರು ಅನ್ನು ಪಿಎಫ್‌ಆರ್‌ಡಿ ವ್ಯಾಪ್ತಿಯಿಂದ ಹೊರಗೆ ತರುವ ಅಂಶವನ್ನೂ ಒಳಗೊಳ್ಳು ಹುದು ಎನ್ನಲಾಗಿದೆ.

## ❖ ಮದ್ಯ ಸುಂಕ: ರಾಜ್ಯದ ಕ್ರಮಕ್ಕೆ ಬಿಎಐ ಸ್ವಾಗತ

**ಸಂದರ್ಭ: ಪೇಯದಲ್ಲಿ ಇರುವ ಮದ್ಯದ ಪ್ರಮಾಣಕ್ಕೆ ಅನುಗುಣವಾಗಿ ಸುಂಕ ವಿಧಿಸುವ ಕರ್ನಾಟಕದ ಕ್ರಮವನ್ನು ಇತರ ರಾಜ್ಯಗಳೂ ಅನುಕರಿಸಬೇಕು ಎಂಬ ನಿರೀಕ್ಷೆ ಹೊಂದಿರುವುದಾಗಿ ಭಾರತೀಯ ಮದ್ಯ ತಯಾರಕರ ಸಂಘ (ಬಿಎಐ) ಹೇಳಿದೆ.**

- ಮದ್ಯದ ಪ್ರಮಾಣಕ್ಕೆ ಅನುಗುಣವಾಗಿ ಪೇಯದ ಮೇಲೆ ಸುಂಕ ವಿಧಿಸುವುದಕ್ಕೆ ಸಂಬಂಧಿಸಿದ ಕರಡು ಅಧಿಸೂಚನೆಯನ್ನು ರಾಜ್ಯ ಸರ್ಕಾರವು ಶನಿವಾರ ಹೊರಡಿಸಿದೆ.
- ಕರ್ನಾಟಕ ಇರಿಸಿರುವ ಹೆಜ್ಜೆಯು ಮಹತ್ವದ ಪರಿವರ್ತನೆ ತರುವಂಥದ್ದು ಎಂದು ಹೇಳಿರುವ ಬಿಎಐ, ಇದರಿಂದಾಗಿ ವರಮಾನ ಸಂಗ್ರಹವು ಉತ್ತಮವಾಗಲಿದೆ ಎಂದು ಹೇಳಿದೆ.
- ಮದ್ಯದ ಮೇಲೆ ತೆರಿಗೆ ವಿಧಿಸಬೇಕೇ ವಿನಾ ಅದರ ಜೊತೆ ಇರುವ ನೀರಿನ ಮೇಲೆ ಅಲ್ಲ ಎಂಬ ನಂಬಿಕೆಯ ಆಧಾರದಲ್ಲಿ 'ಕರ್ನಾಟಕ ಅಬಕಾರಿ (ಅಬಕಾರಿ ಸುಂಕ ಮತ್ತು ಶುಲ್ಕಗಳ ತಿದ್ದುಪಡಿ) ನಿಯಮ - 2026' ಹೊಸ ತೆರಿಗೆ ವ್ಯವಸ್ಥೆಯನ್ನು ರೂಪಿಸುತ್ತದೆ ಎಂದು ಬಿಎಐ ಹೇಳಿದೆ.
- 'ಇದು ಮದ್ಯದ ಮೇಲಿನ ತೆರಿಗೆಯ ವಿಚಾರದಲ್ಲಿ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್ ಒ) ಶಿಫಾರಸು ಮಾಡಿರುವುದಕ್ಕೆ ಅನುಗುಣವಾಗಿದೆ. ಇದನ್ನು ಜಾಗತಿಕವಾಗಿ ವ್ಯಾಪಕವಾಗಿ ಅನುಸರಿಸಲಾಗುತ್ತಿದೆ' ಎಂದೂ ಬಿಎಐ ಹೇಳಿದೆ.
- ದೇಶದ ಪ್ರಮುಖ ಮದ್ಯ ತಯಾರಿಕಾ ಕಂಪನಿಗಳಾದ ಯುನೈಟೆಡ್ ಬ್ರಿವರಿಸ್, ಎಬಿಇನ್‌ಬೆವ್ ಕಾರ್ಲ್ಸ್ ಬರ್ಗ್ ಈ ಸಂಘಟನೆಯ ಸದಸ್ಯತ್ವ ಹೊಂದಿವೆ ಇವು ಒಟ್ಟಾಗಿ ದೇಶದ ಬಿಯರ್ ಮಾರುಕಟ್ಟೆಯಲ್ಲಿ ಶೇ 85ರಷ್ಟು ಪಾಲು ಹೊಂದಿವೆ.
- ಪೇಯದಲ್ಲಿ ಇರುವ ಮದ್ಯದ ಪ್ರಮಾಣಕ್ಕೆ ಅನುಗುಣವಾದ ಸುಂಕ ವಿಧಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಭಾಷಣದಲ್ಲಿ ಪ್ರಕಟಿಸಿದ್ದರು.

Dr. Rajkumar IAS/KAS Academy

- 'ಈ ಬಗೆಯ ತೆರಿಗೆ ವ್ಯವಸ್ಥೆಯನ್ನು ಘೋಷಿಸುವ ಮೂಲಕ ಕರ್ನಾಟಕವು ವರಮಾನ ಹೆಚ್ಚಳ ಗುರಿಯನ್ನು ಅಪೇಕ್ಷಿತ ಸಾರ್ವಜನಿಕ ಆರೋಗ್ಯದ ಜೊತೆ ಜೋಡಿಸಿದ ಮೊದಲ ರಾಜ್ಯವಾಗಿದೆ' ಎಂದು ಬಿಎಐ ಮಹಾನಿರ್ದೇಶಕ ವಿನೋದ್ ಗಿರಿ ಹೇಳಿದ್ದಾರೆ.

## ❖ ಅಸ್ಸಾಂನ ಬಿಹು ಪ್ರದರ್ಶಿಸಿದ ಅಮೆರಿಕ ಗಗನಯಾತ್ರಿ

**ಸಂದರ್ಭ: ಅಮೆರಿಕದ ಗಗನಯಾತ್ರಿಯೊಬ್ಬರು ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಅಸ್ಸಾಂನ ಸಾಂಪ್ರದಾಯಿಕ 'ಬಿಹು' ಪ್ರದರ್ಶನ ನೀಡಿದ್ದಾರೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಗಗನಯಾತ್ರಿಯನ್ನು ಅಭಿನಂದಿಸಿದ್ದಾರೆ.**

- ಗಗನಯಾತ್ರಿ ಮೈಸ್ ಫಿಂಕೆ ಅವರು ಅಸ್ಸಾಂನ ರೆನಿಟಾ ಸೈಕಿಯಾ ಅವರನ್ನು ವಿವಾಹವಾಗಿದ್ದಾರೆ. ಬಾಹ್ಯಾಕಾಶದಲ್ಲಿ ಅವರು ಕುತ್ತಿಗೆಗೆ ಸಾಂಪ್ರದಾಯಿಕ 'ಗಮೋಸಾ' (ಸ್ಕಾರ್ಫ್) ಧರಿಸಿ, ಬಿಹು ಸಂಗೀತದೊಂದಿಗೆ ನೃತ್ಯ ಪ್ರದರ್ಶಿಸಿದ್ದಾರೆ.
- ಈ ವಿಡಿಯೋವನ್ನು 'ಎಕ್ಸ್‌ನಲ್ಲಿ ಹಂಚಿಕೊಂಡಿರುವ ಹಿಮಂತ ಬಿಸ್ವಾ ಅವರು, ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಬಿಹು ಪ್ರದರ್ಶನಗೊಂಡಿದೆ. ಅಸ್ಸಾಂನ ಸಂಸ್ಕೃತಿಗೆ ವಿಶೇಷ ಗೌರವ ನೀಡಿದ್ದಕ್ಕಾಗಿ ಮೈಕ್ ಫಿಂಕೆ ಅವರಿಗೆ ಧನ್ಯವಾದಗಳು ಎಂದು ಹೇಳಿದ್ದಾರೆ.
- 'ರೊಂಗಾಲಿ ಬಿಹು ಹಬ್ಬದ ಮೂಲಕ ಅಸ್ಸಾಂನಲ್ಲಿ ಹೊಸ ವರ್ಷವನ್ನು ಬರಮಾಡಿಕೊಳ್ಳಲಾಗುತ್ತದೆ.



## ❖ ಪ್ರಯತ್ನ ಮುಂದುವರಿಸಿದ ಪಾಕಿಸ್ತಾನ ಇರಾನ್ ಹಡಗು ಅಮೆರಿಕ ವಶಕ್ಕೆ: ಮಾತುಕತೆಗೆ ಇರಾನ್ ಹಿಂದೇಟು

**ಸಂದರ್ಭ: ಹೊರ್ಮುಜ್ ಜಲಸಂಧಿ ವಿಚಾರದಲ್ಲಿ ಅಮರಿಕ ಮತ್ತು ಇರಾನ್ ನಡುವೆ ಉದ್ವಿಗ್ನ ಸ್ಥಿತಿ ಮತ್ತಮ್ಮ ಹೆಚ್ಚಿರುವುದರಿಂದ ಎರಡನೇ ಸುತ್ತಿನ ಮಾತುಕತೆ ಬಗ್ಗೆ, ಅನಿಶ್ಚಿತತೆ ಮುಂದುವರಿದಿದೆ. ಅಮೆರಿಕವು ಮಾತುಕತೆಗೆ ಉತ್ಸುಕತೆ ತೋರಿದೆಯಾದರೂ, ಇರಾನ್ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ.**

- ಈ ನಡುವೆ, ಇರಾನ್ ಸರಕು ಸಾಗಣೆ ಹಡಗನ್ನು ಅಮೆರಿಕ ಸೇನೆ ತನ್ನ ವಶಕ್ಕೆ ತೆಗೆದುಕೊಂಡಿರುವುದು ಹೊಸ ಸಂಘರ್ಷದ ಆತಂಕ ಮೂಡಿಸಿದೆ. ಇರಾನ್ ಬಂದರುಗಳ ಮೇಲೆ ತಾನು ವಿಧಿಸಿರುವ ದಿಗ್ಬಂಧನವನ್ನು ಉಲ್ಲಂಘಿಸಿರುವುದಕ್ಕೆ ಹಡಗನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಅಮೆರಿಕ ಹೇಳಿದೆ. ಈ ಕ್ರಮಕ್ಕೆ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಇರಾನ್ ಎಚ್ಚರಿಸಿದ್ದು ಹೊರ್ಮುಜ್ ಜಲಸಂಧಿ ಮೇಲಿನ ತನ್ನ ಹಿಡಿತ ಬಿಗಿಗೊಳಿಸಿದೆ.
- ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿರುವಂತೆ ಎರಡನೇ ಸುತ್ತಿನ ಮಾತುಕತೆಯು ಇಸ್ಲಾಮಾಬಾದ್ ನಲ್ಲಿ ಮಂಗಳವಾರ ಬೆಳಿಗೆ, ಆರಂಭವಾಗಬೇಕು. 'ಉಪಾಧ್ಯಕ್ಷ ಜೆ.ಡಿ. ವ್ಯಾನ್ ನೇತೃತ್ವದ ಅಮೆರಿಕ ನಿಯೋಗವು ನೀವುದಲ್ಲಿ ಬಾಕಿಸ್ತಾನ ತಲುಪಲಿದೆ' ಎಂದು ಟ್ರಂಗ್, ಸೋಮವಾರ 'ನ್ಯೂಯಾರ್ಕ್ ಪೋವಾ'ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.
- 'ಶಾಂತಿ ಒಪ್ಪಂದ ಸಾಧ್ಯವಾದರೆ ಇರಾನ್ ನಾಯಕರನ್ನು ಸ್ವತಃ ಭೇಟಿಯಾಗುವುದನ್ನು ಎದುರು ನೋಡುತ್ತಿದ್ದೇನೆ' ಎಂದೂ ಹೇಳಿದ್ದಾರೆ. ಆದರೆ, ಮಾತುಕತೆಯಲ್ಲಿ ಪಾಲ್ಗೊಳ್ಳುವ ಬಗ್ಗೆ, ಇರಾನ್, ರಾತ್ರಿಯವರೆಗೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ.
- 'ಅಮೆರಿಕದ ಜತೆ ಎರಡನೇ ಸುತ್ತಿನ ಮಾತುಕತೆಯಲ್ಲಿ ಪಾಲ್ಗೊಳ್ಳುವ ತೀರ್ಮಾನವನ್ನು ಇದುವರೆಗೆ ಮಾಡಿಲ್ಲ' ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಖಾಯಿ ಹೇಳಿದ್ದಾರೆ.
- 'ಅಮೆರಿಕದ ಜತೆ ಮಾತುಕತೆಯಲ್ಲಿ ಪಾಲ್ಗೊಳ್ಳುವುದನ್ನು 'ಸಕಾರಾತ್ಮಕ' ವಾಗಿ ಪರಿಶೀಲಿಸಲಾಗುತ್ತಿದೆಯಾದರೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ' ಎಂದು ಇಲಾನ್‌ನ ಹಿರಿಯ ಅಧಿಕಾರಿ ಯೊಬ್ಬರು ತಿಳಿಸಿದ್ದಾರೆ. ಮಾತುಕತೆ ನಡೆಯುವ ಸಾಧ್ಯತೆ ಕಡಿಮೆ ಎಂದು ಅನಾಮಧೇಯ ಮೂಲಗಳನ್ನು ಉಲ್ಲೇಖಿಸಿ ಇರಾನ್ ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ.
- "ಇರಾನ್ ಹಡಗುಗಳು ಮತ್ತು ಬಂದರುಗಳಿಗೆ ಅಮೆರಿಕ ಬೆದರಿಕೆ ಹಾಕಿರುವುದು ಯೋಜಿತ ಮಾತುಕತೆಗೆ ಮುನ್ನ ಆ ದೇಶದ ಕಪಟತನವನ್ನು ಬಯಲು ಮಾಡಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಆರಾತ್ಮ ಹೇಳಿದ್ದಾರೆ.
- ಡೊನಾಲ್ಕು ಪ್ರಿಂನ್ ಅವರು ಇರಾನ್ ಜತೆಗೆ ಎರಡನೇ ಸುತ್ತಿನ ಮಾತುಕತೆ ನಡೆಯುವುದನ್ನು ಭಾನುವಾರ ಖಚಿತಪಡಿಸಿದರು. 'ಉಪಾಧ್ಯಕ್ಷ ಜೆಡಿ ವ್ಯಾನ್ ನೇತೃತ್ವದ ನಿಯೋಗ ಪಾಕಿಸ್ತಾನಕ್ಕೆ ತೆರಳಲಿದೆ' ಎಂದಿದ್ದರು.
- ವಾಕ್ ಪ್ರಯತ್ನ ಎರಡು ವಾರಗಳ ಕದನ ವಿರಾಮ ಬುಧವಾರ ಕೊನೆಗೊಳ್ಳಲಿದ್ದು, ಅದಕ್ಕೂ ಮುನ್ನ ಮತ್ತೊಂದು ಸುತ್ತಿನ ಮಾತುಕತೆ ಆಯೋಜಿಸುವ ಪ್ರಯತ್ನವನ್ನು ಪಾಕಿಸ್ತಾನ ಮುಂದುವರಿಸಿದೆ. ಕಳೆದ 24 ಗಂಟೆಗಳಲ್ಲಿ ಪಾಕಿಸ್ತಾನವು ಎರಡೂ ದೇಶಗಳ ಪ್ರತಿನಿಧಿಗಳ ಜತೆ ನಿರಂತರ ಸಂಪರ್ಕ ಇರಿಸಿಕೊಂಡಿದ್ದು, ಶಾಂತಿ ಮಾತುಕತೆಯನ್ನು ಆರಂಭಿಸುವ ಗುರಿಯನ್ನು ಹೊಂದಿದೆ ಎಂದು ಮೂಲಗಳು ತಿಳಿಸಿವೆ.

### ಹೊರ್ಮುಜ್: ನಿರ್ಬಂಧ ಮುಂದುವರಿಕೆ

- ಹೊರ್ಮುಜ್‌ನಲ್ಲಿ ಹಡಗುಗಳ ಸಂಚಾರದ ಮೇಲೆ ಇರಾನ್ ಹೇರಿರುವ ನಿರ್ಬಂಧ ಮುಂದುವರಿದಿದೆ. ಮೂರು ಹಡಗುಗಳು ಮಾತ್ರ ಜಲಸಂಧಿಯನ್ನು ದಾಟಿವೆ ಎಂದು ಉಪಗ್ರಹಗಳ ನೆರವಿನಿಂದ ಹಡಗುಗಳ ಸಂಚಾರದ ದತ್ತಾಂಶ ವಿಶ್ಲೇಷಣೆ ಮಾಡುವ 'ಸಿನ್‌ಮ್ಯಾಕ್ಸ್' ತಿಳಿಸಿದೆ. ತನ್ನ ಬಂದರುಗಳ ಮೇಲೆ ಅಮೆರಿಕ ವಿಧಿಸಿರುವ ದಿಗ್ಬಂಧನಕ್ಕೆ ಪ್ರತಿಯಾಗಿ ಇರಾನ್ ಸೇನೆ ಹೊರ್ಮುಜ್ ಜಲಸಂಧಿಯನ್ನು ಶನಿವಾರದಿಂದ ಸಂಪೂರ್ಣ ಮುಚ್ಚಿದೆ.



Dr. Rajkumar IAS/KAS Academy

## ❖ ಮೂಲಸೌಕರ್ಯ ವಲಯದ ಪ್ರಗತಿ ಇಳಿಕೆ

**ಸಂದರ್ಭ: ದೇಶದ ಎಂಟು ಪ್ರಮುಖ ಮೂಲಸೌಕರ್ಯ ವಲಯಗಳ ಬೆಳವಣಿಗೆ ಮಾರ್ಚ್ ತಿಂಗಳಿನಲ್ಲಿ (-) ಶೇ 0.4ಕ್ಕೆ ಇಳಿಕೆ ಆಗಿದೆ ಎಂದು ಕೇಂದ್ರ ಸರ್ಕಾರದ ಅಂಕಿ ಅಂಶಗಳು ತಿಳಿಸಿವೆ. ಇದು ಐದು ತಿಂಗಳ ಕನಿಷ್ಠ ಮಟ್ಟ.**

- ಕಲ್ಲಿದ್ದಲು ಕಚ್ಚಾ ತೈಲ ರಸಗೊಬ್ಬರ ಮತ್ತು ವಿದ್ಯುತ್ ಉತ್ಪಾದನೆಯಲ್ಲಿ ಇಳಿಕೆ ಆಗಿದೆ. ಇದೇ ಬೆಳವಣಿಗೆ ಇಳಿಕೆಗೆ ಕಾರಣ ಎಂದು ತಿಳಿಸಿದ ನೈಸರ್ಗಿಕ ಅನಿಲ ಉತ್ಪಾದನೆಯು ಬೆಳವಣಿಗೆ ದಾಖಲಿಸಿದೆ.
- ಫೆಬ್ರುವರಿಯಲ್ಲಿ ಈ ವಲಯಗಳ ಬೆಳವಣಿಗೆ ಶೇ 2.8ರಷ್ಟಾಗಿತ್ತು.
- 2024-25ರ ಪೂರ್ಣ ಆರ್ಥಿಕ ವರ್ಷದಲ್ಲಿ ಈ ವಲಯಗಳ ಬೆಳವಣಿಗೆ ದರ ಶೇ 4.5ರಷ್ಟಿತ್ತು ಅದು 2025-26ರಲ್ಲಿ ಶೇ 2.6ಕ್ಕೆ ಇಳಿದಿದೆ ಇದು ಕಳೆದ 5 ಆರ್ಥಿಕ ವರ್ಷದ ಕನಿಷ್ಠ ಮಟ್ಟವಾಗಿದೆ.

## ❖ ರಾಜ್ಯಗಳ ಬಂಡವಾಳ ವೆಚ್ಚ ಇಳಿಕೆ?

**ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯಗಳ ಬಂಡವಾಳ ವೆಚ್ಚದ ಬೆಳವಣಿಗೆಯು ಶೇ 8ರಿಂದ ಶೇ 10ರಷ್ಟು ಇಳಿಕೆ ಆಗಬಹುದು ಎಂದು ಕೇರ್‌ಎಡ್ಜ್ ರೇಟಿಂಗ್ ವರದಿ ಅಂದಾಜಿಸಿದೆ.**

- ರಾಜ್ಯಗಳ ವೆಚ್ಚ ಹೆಚ್ಚಳವಾಗುತ್ತಿದೆ. ಆದರೆ, ವರಮಾನದಲ್ಲಿನ ಬೆಳವಣಿಗೆ ಕಡಿಮೆ ಆಗುತ್ತಿದೆ. ಇದು ಪ್ರಗತಿ ನಿಧಾನವಾಗಲು ಒಂದು ಕಾರಣವಾಗಿದೆ ಎಂದು ತಿಳಿಸಿದೆ.
- ಪಶ್ಚಿಮ ಏಷ್ಯಾದ ಸಂಘರ್ಷದಿಂದ ಇಂಧನ ದರ ಏರಿಕೆಯಾಗಲಿದ್ದು ವರಮಾನ ಮತ್ತು ವೆಚ್ಚದ ಮೇಲೆ ಒತ್ತಡ ಬೀಳುವ ನಿರೀಕ್ಷೆ ಇದೆ ಎಂದು ತಿಳಿಸಿದೆ.
- ಕೇಂದ್ರದಿಂದ ರಾಜ್ಯಗಳಿಗೆ ಬರುವ ಅನುದಾನ ಕಡಿಮೆ ಆಗುವುದರಿಂದ 2025-26 ಮತ್ತು 2026-27ರ ಆರ್ಥಿಕ ವರ್ಷದಲ್ಲಿ ರಾಜ್ಯಗಳ ವರಮಾನ ಬೆಳವಣಿಗೆ ಮಧ್ಯಮ ಮಟ್ಟದಲ್ಲಿ ಉಳಿಯುವ ನಿರೀಕ್ಷೆಯಿದೆ ಎಂದು ಸಂಸ್ಥೆಯ ಸಹಾಯಕ ನಿರ್ದೇಶಕ ಪ್ರಸನ್ನ ಕೃಷ್ಣನ್ ಹೇಳಿದ್ದಾರೆ.
- ಪ್ರಸಕ್ತ ಆರ್ಥಿಕ ವರ್ಷದ ಒಟ್ಟಾರೆ ವರಮಾನದ ಮೇಲೆ ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಬಿಕ್ಕಟ್ಟಿನಂತಹ ಅಂಶಗಳು ಪರಿಣಾಮ ಬೀರಲಿವೆ ಎಂದು ಹೇಳಿದ್ದಾರೆ.
- ವಿತ್ತೀಯ ಕೊರತೆಯು 2024-25ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯ (ಜಿಎಸ್‌ಡಿಪಿ) ಶೇ 0.8ರಷ್ಟಿತ್ತು ಇದು 2026-27ರಲ್ಲಿ ಶೇ 1.2ಕ್ಕೆ ಹೆಚ್ಚಳವಾಗಬಹುದು ರಾಜ್ಯಗಳು ಸಮಾಜ ಕಲ್ಯಾಣ ಕಾರ್ಯಗಳಿಗೆ ಬಂಡವಾಳ ಉಳಿಸಿಕೊಳ್ಳುವ ಅಗತ್ಯವಿದ್ದು ಹಣಕಾಸಿನ ಶಿಸ್ತನ್ನು ಕಾಪಾಡಿಕೊಳ್ಳಬೇಕಿದೆ ಎಂದು ಹೇಳಿದ್ದಾರೆ.

## ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಯುದ್ಧ; ರಫ್ತು, ಸಂಪೂರ್ಣ ಸ್ಥಗಿತ: ಕುಸಿದ ಗುಲಾಬಿ ಈರುಳ್ಳಿ ಧಾರಣೆ

**ಸಂದರ್ಭ: ಯುದ್ಧದಿಂದ ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಉಂಟಾಗಿರುವ ಅಸ್ಥಿರತೆಯು, ಜಿಲ್ಲೆಯಲ್ಲಿ ಗುಲಾಬಿ ಈರುಳ್ಳಿ, ರಫ್ತು, ವಹಿವಾಟಿನ ಮೇಲೆ ನೇರ ಪರಿಣಾಮ ಬೀರಿದೆ.**

- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅಂದಾಜು ಐದು ಸಾವಿರ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಈ ಗುಲಾಬಿ ಈರುಳ್ಳಿಯನ್ನು ಸ್ಥಳೀಯ ಬಳಕೆಗಿಂತಲೂ ರಫ್ತು, ಉದ್ದೇಶಕ್ಕಾಗಿಯೇ ಬೆಳೆಯಲಾ ಗುತ್ತದೆ. ಬೆಂಗಳೂರು ಸುತ್ತಮುತ್ತ ಗುಲಾಬಿ ಈರುಳ್ಳಿ, ಹೆಚ್ಚು ಬೆಳೆಯುವ ಕಾರಣ 'ಬೆಂಗಳೂರು ಗುಲಾಬಿ ಈರುಳ್ಳಿ' ಹೆಸರಿನಲ್ಲಿ ಇದು ಭೌಗೋಳಿಕ ಮಾನ್ಯತೆ ಯನ್ನು ಪಡೆದಿದೆ.
- ಚಿಕ್ಕಬಳ್ಳಾಪುರ ಗುಲಾಬಿ ಈರುಳ್ಳಿ, ಮಲೇಷ್ಯಾ ಬಾಂಗ್ಲಾದೇಶ ಬಿಟ್ಟರೆ ಪಶ್ಚಿಮ ಏಷ್ಯಾ ದೇಶಗಳಿಗೆ ರಫ್ತಾಗುತ್ತದೆ. ಯುದ್ಧದಿಂದಾಗಿ ರಫ್ತು, ಸಂಪೂರ್ಣವಾಗಿ ಸ್ಥಗಿತಗೊಂಡಿದೆ.

Dr. Rajkumar IAS/KAS Academy

- ಸ್ಥಳೀಯ ಮಾರುಕಟ್ಟೆಯಲ್ಲಿ ₹100 ರಿಂದ ₹150ಕ್ಕೆ ಮಾರಾಟವಾಗುತ್ತಿದ್ದ ಒಂದು ಕೆ.ಜಿ. ಈರುಳ್ಳಿ ಬೆಲೆ, ಈಗ ₹8ರಿಂದ ₹10ಕ್ಕೆ ಕುಸಿದಿದೆ. 50 ಕೆ.ಜಿಯ ಮೂಟೆ ಗುಲಾಬಿ ಈರುಳ್ಳಿಯನ್ನು ₹300ರಿಂದ ₹400ಕ್ಕೂ ಖರೀದಿ ಮಾಡುವವರೂ ಇಲ್ಲದಂತಾಗಿದೆ. ಈ ಹಿಂದೆ ಮೂಟೆ ದರ ₹6 ಸಾವಿರದಿಂದ 18 ಸಾವಿರದವರೆಗೂ ಇತ್ತು
- ಔಷಧ ಗುಣಗಳಿಂದಾಗಿ ಗುಲಾಬಿ ಈರುಳ್ಳಿಗೆ ವಿದೇಶದಲ್ಲಿ ಭಾರಿ ಬೇಡಿಕೆ ಇದೆ. ಸ್ಥಳೀಯ ಮಾರುಕಟ್ಟೆಯಲ್ಲಿ ಗುಲಾಬಿ ಈರುಳ್ಳಿಯನ್ನು ಕೇಳುವವರು ಇಲ್ಲದಂತಾಗಿದೆ ಮನೆಗೆ ಬಳಸುವುದಕ್ಕಿಂತ ಹೆಚ್ಚಾಗಿ ಹೋಟೆಲ್ ಮದುವೆ ಶುಭ ಕಾರ್ಯಗಳ ಅಡುಗೆಯಲ್ಲಿ ಈ ಈರುಳ್ಳಿ ಬಳಕೆ ಹೆಚ್ಚು ಅಡುಗೆ ಅನಿಲ ಕೊರತೆಯಿಂದ ಹೋಟೆಲ್ ಬಾಗಿಲು ಮುಚ್ಚಿರುವುದರಿಂದ ಸ್ಥಳೀಯ ಮಾರುಕಟ್ಟೆಯಲ್ಲೂ ಬೇಡಿಕೆ ಕಳೆದುಕೊಂಡಿದೆ.
- ಈ ಭಾಗದಲ್ಲಿ ಈರುಳ್ಳಿ ನಿರ್ಜಲೀಕರಣ ಮತ್ತು ಸಂಸ್ಕರಣಾ ಘಟಕಗಳು ಇಲ್ಲದ ಕಾರಣ ರೈತರು ದಾಸ್ತಾನು ಮಾಡಲು ಸಾಧ್ಯವಿಲ್ಲ ಬೆಳೆದ ಬೆಳೆಯನ್ನು ಜಮೀನಿನಲ್ಲೇ ಬಿಡುವ ಸ್ಥಿತಿಯನ್ನು ರೈತರು ಎದುರಿಸುತ್ತಿದ್ದಾರೆ.
- ಗುಲಾಬಿ ಈರುಳ್ಳಿ, ಸ್ಥಳೀಯ ಮಾರುಕಟ್ಟೆಗಿಂತ ವಿದೇಶಿ ಮಾರುಕಟ್ಟೆಯನ್ನು ಹೆಚ್ಚಾಗಿ ಅವಲಂಬಿಸಿದ ಸರ್ಕಾರ ಇದನ್ನು ಮೂರು ಅಥವಾ ನಾಲ್ಕು ತಿಂಗಳು ಸಂರಕ್ಷಿಸಿಡಲು ಸೂಕ್ತ ವ್ಯವಸ್ಥೆ ಮಾಡಿಕೊಡಬೇಕು ಕನಿಷ್ಠ ದರವನ್ನು ನಿಗದಿಪಡಿಸಬೇಕು ಎಂದು ಶಿಡ್ಲಘಟ್ಟ ತಾಲ್ಲೂಕಿನ ಬಶೆಟ್ಟಿಹಳ್ಳಿ, ಗಂಗಾಭವಾನಿ ಎಫ್ ಪಿ ಒ ಅಧ್ಯಕ್ಷ ವಿಜಯಭಾವರೆಡ್ಡಿ, ಆಗ್ರಹಿಸಿದ್ದಾರೆ.

## ❖ ಜಪಾನ್: 7.5 ತೀವ್ರತೆಯ ಭೂಕಂಪ

**ಸಂದರ್ಭ: ಉತ್ತರ ಜಪಾನಿನ ಕರಾವಳಿಯಲ್ಲಿ ಪ್ರಬಲ ಭೂಕಂಪ ಸಂಭವಿಸಿದ್ದು ಪ್ರದೇಶದಲ್ಲಿ ಸುನಾಮಿ ಅಪ್ಪಳಿಸುವ ಅಪಾಯವಿದೆ ಎಂದು ದೇಶದ ಹವಾಮಾನ ಸಂಸ್ಥೆ ಎಚ್ಚರಿಕೆ ನೀಡಿದೆ.**

- ಉತ್ತರ ಜಪಾನ್ ಸ್ಯಾತ್ರಿಕು ಕರಾವಳಿಯಲ್ಲಿ ಸಂಜೆ 4:53ರ ಸುಮಾರಿಗೆ ಸಮುದ್ರ ಮಟ್ಟದಿಂದ ಸುಮಾರು 10 ಕಿ.ಮೀ. ಆಳದಲ್ಲಿ ಭೂಕಂಪ ಸಂಭವಿಸಿದ್ದು ರಿಕ್ಟರ್ ಮಾಪಕದಲ್ಲಿ 7.5 ರಮ್ಮ ತೀವ್ರತೆ ದಾಖಲಾಗಿದೆ ಎಂದು ಸಂಸ್ಥೆ ತಿಳಿಸಿದೆ.
- ಇವಾಟೆ ವ್ಯಾಂದ ಕುಜಿ ಬಂದರಿನಲ್ಲಿ ಸುಮಾರು 2.6 ಅಡಿ ಎತ್ತರದ ಸುನಾಮಿ ಪತ್ತೆಯಾಗಿದ್ದು ಪ್ರಾಂತ್ಯದ ಮತ್ತೊಂದು ಬಂದರಿನಲ್ಲಿ 1.3 ಅಡಿ ಎತ್ತರದ ಸಣ್ಣ ಸುನಾಮಿ ಎದ್ದಿದೆ ಎಂದು ಸಂಸ್ಥೆ ತಿಳಿಸಿದೆ.
- ಪ್ರದೇಶದ ನಿವಾಸಿಗಳು ತಕ್ಷಣವೇ ಕರಾವಳಿ ಅಥವಾ ನದಿ ತೀರದಿಂದ ದೂರವಿದ್ದು ಎತ್ತರದ ಪ್ರದೇಶದಲ್ಲಿ ಆಶ್ರಯ ಪಡೆಯುವಂತೆ ಸಂಸ್ಥೆ ಕೇಳಿಕೊಂಡಿದೆ ಜೊತೆಗೆ ಸುಮಾರು ಒಂದು ವಾರದವರೆಗೆ ಸಂಭವನಿಯ ಭೂಕಂಪದ ಬಗ್ಗೆಯೂ ಜನರಿಗೆ ಎಚ್ಚರಿಕೆ ನೀಡಿದೆ.

## ❖ ಡೋಪಿಂಗ್: ವಿಶ್ವ ಅಥ್ಲೆಟಿಕ್ಸ್‌ನ ಇಂಟೆಗ್ರಿಟಿ ಘಟಕ ಎಚ್ಚರಿಕೆ: ತೀವ್ರ ಅಪಾಯ ಎದುರಿಸುತ್ತಿರುವ ಭಾರತ

**ಸಂದರ್ಭ: ಎರಡು ವರ್ಷಗಳಿಂದ ಡೋಪಿಂಗ್ ನಿಯಮ ಉಲ್ಲಂಘಿಸುವ ಕ್ರೀಡಾಪಟುಗಳ ಪಟ್ಟಿಯಲ್ಲಿ ಭಾರತ ಅಗ್ರಸ್ಥಾನದಲ್ಲಿದೆ. ಇದೀಗ ವಿಶ್ವ ಅಥ್ಲೆಟಿಕ್ಸ್‌ನ ಅಥ್ಲೆಟಿಕ್ಸ್ ಇಂಟೆಗ್ರಿಟಿ ಘಟಕವು (ಎಐಯು), ಭಾರತವನ್ನು 'ಉದ್ದೀಪನ ಮದ್ದು ಸೇವನೆ ವಿಷಯದಲ್ಲಿ ಅತಿ ಹೆಚ್ಚಿನ ಅಪಾಯ ಎದುರಿಸುತ್ತಿರುವ ದೇಶ' ಎಂದು ವರ್ಗೀಕರಿಸಿದೆ.**

- ಈ ಬೆಳವಣಿಗೆಯಿಂದಾಗಿ ಅಥ್ಲೀಟುಗಳು ಉದ್ದೀಪನ ಮದ್ದು ಸೇವನೆ ತಡೆ ನಿಯಮಗಳಿಗೆ ಮೊದಲಿಗಿಂತ ಕಟ್ಟುನಿಟ್ಟಾಗಿ ಒಳಗಾಗಬೇಕಾಗುತ್ತದೆ.
- ವಿಶ್ವ ಅಥ್ಲೆಟಿಕ್ಸ್‌ನ ಉದ್ದೀಪನ ಮದ್ದು ಸೇವನೆ ತಡೆ ನಿಯಮಗಳ 15ನೇ ವಿಧಿಯಡಿ ಇಂಟೆಗ್ರಿಟಿ ಘಟಕವು ಭಾರತ ಅಥ್ಲೆಟಿಕ್ಸ್ ಫೆಡರೇಷನ್‌ಅನ್ನು 'ಬಿ ವಿಭಾಗದಿಂದ 'ಎ' ವಿಭಾಗಕ್ಕೆ (ಕೆಟಗರಿಗೆ) ಸೇರ್ಪಡೆ ಮಾಡಿದೆ.

- 'ಭಾರತದಲ್ಲಿ ಉದ್ದೀಪನ ಮದ್ದು ಸೇವನೆ ಪರಿಸ್ಥಿತಿ ದೀರ್ಘಕಾಲದಿಂದ ಅಪಾಯಕಾರಿ ಮಟ್ಟದಲ್ಲಿಯೇ ಇದೆ. ಉದ್ದೀಪನ ಮದ್ದು ಸೇವನೆ ಪ್ರಕರಣಗಳಿಗೆ ತಡೆಯೊಡ್ಡುವ ಯೋಜನೆಗಳ ಗುಣಮಟ್ಟ ದುರದೃಷ್ಟವಶಾತ್ ಪರಿಣಾಮಕಾರಿ ಯಾಗಿಲ್ಲ' ಎಂದು ಎಐಯು ಮಂಡಳಿಯ ಮುಖ್ಯಸ್ಥ ಡೇವಿಡ್ ಹೌಮನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.
- ಉದ್ದೀಪನ ಮದ್ದು ಸೇವನೆ ತಡೆ ನಿಯಮಗಳಿಗೆ ಸಂಬಂಧಿಸಿ ಸುಧಾರಣೆ ತರಲು ಭಾರತ ಅಥ್ಲೆಟಿಕ್ ಫೆಡರೇಷನ್ ಯತ್ನಿಸಿದರೂ ಪ್ರಗತಿ ಗಮನಾರ್ಹವಾಗಿಲ್ಲ. ಈ ಹಿಂದೆ 'ಎ' ವಿಭಾಗದ ಇತರ ಸದಸ್ಯ ಫೆಡರೇಷನ್ನಳ ಜೊತೆ ಕಾರ್ಯ ನಿರ್ವಹಿಸಿದಂತೆ, ಉದ್ದೀಪನ ಮದ್ದು ಪಿಡುಗಿಗೆ ಪರಿಣಾಮಕಾರಿ ಕ್ರಮಗಳ ಜಾರಿಗೆ ಭಾರತದ ಫೆಡರೇಷನ್ ಜೊತೆ ಎಐಯು ಕೈಜೋಡಿಸಲಿದೆ' ಎಂದು ಅವರು ಹೇಳಿದ್ದಾರೆ.
- 2022 ರಿಂದ 2025ರ ಅವಧಿಯಲ್ಲಿ ಅಥ್ಲೆಟಿಕ್ಸ್‌ನಲ್ಲಿ ಡೋಪಿಂಗ್ ನಿಯಮಗಳ ಅತಿ ಹೆಚ್ಚು ಉಲ್ಲಂಘನೆಯಲ್ಲಿ ಭಾರತವು ವಿಶ್ವದ ಅಗ್ರ ಎರಡರಲ್ಲಿ ಸ್ಥಾನ ಪಡೆದಿದೆ.
- ವಿಶ್ವ ಅಥ್ಲೆಟಿಕ್ಸ್‌ನ ಡೋಪಿಂಗ್ ನಿಗ್ರಹ ನಿಯಮಗಳಿಗೆ ಸಂಬಂಧಿಸಿ ಎಐಯು ಮೂರು ವಿಭಾಗಗಳನ್ನು ಮಾಡಿದೆ ಎ ವಿಭಾಗದಲ್ಲಿ ಅತಿ ಹೆಚ್ಚು ಅಪಾಯವಿರುವ ದೇಶಗಳ ಫೆಡರೇಷನ್‌ಗಳು ಇವೆ. ಬಿ ವಿಭಾಗದಲ್ಲಿ ಮಧ್ಯಮ ಪ್ರಮಾಣದ ರಿಸ್ಕ್ ಇರುವ ದೇಶಗಳು ಇವೆ ಸಿ ವಿಭಾಗದ ಸದಸ್ಯ ಫೆಡರೇಷನ್‌ಗಳಲ್ಲಿ ಡೋಪಿಂಗ್ ಉಲ್ಲಂಘಿಸುವ ಪ್ರಕರಣಗಳು ತೀರಾ ಕಡಿಮೆ ಇರುತ್ತವೆ.
- ಭಾರತದಲ್ಲಿ ಡೋಪಿಂಗ್ ನಿಯಮ ಉಲ್ಲಂಘಿಸಿ ಅಮಾನತುಗೊಂಡ 148 ಕ್ರೀಡಾಪಟುಗಳಿದ್ದಾರೆ. ಈ ವಿಷಯದಲ್ಲಿ ಭಾರತವು ಅಗ್ರಸ್ಥಾನದಲ್ಲಿದ್ದ. ಕೆನ್ಯಾವನ್ನು ಹಿಂದೆಹಾಕಿದೆ.
- ಮೂರು ವರ್ಷಗಳಿಗೊಮ್ಮೆ ಎಐಯು ಮಂಡಳಿಯು ವಿಭಾಗಗಳಲ್ಲಿರುವ ಬೆಡರೇಷನ್ ಸ್ಥಾನಗಳ ಬಗ್ಗೆ, ವಿವೇಚನೆಯ ಮೇರೆಗೆ ನಿರ್ಧಾರ ಕೈಗೊಳ್ಳುತ್ತದೆ.
- ಎ ಕೆಟಗರಿಯಲ್ಲಿರುವ ಸದಸ್ಯ ಫೆಡರೇಷನ್ ನಿಯಮಗಳನ್ನು ಪರಿಣಾಮಕಾರಿ ಚುರುಕಾಗಿ ವಾಲಿನ ಬೇಕಾಗುತ್ತದೆ ವಾರ್ಷಿಕ ಪರೀಕ್ಷಾ ಯೋಜನೆಗಳ ವಿವರ ನಿರ್ವಹಣೆ ಮಾಡಬೇಕಾಗುತ್ತದೆ ಅವುಗಳ ಅನುಷ್ಠಾನ ಅಂತರರಾಷ್ಟ್ರೀಯ ಮಟ್ಟದ ಲ್ಲಿರುವಂತೆ ನೋಡಿಕೊಳ್ಳಬೇಕಾಗುತ್ತದೆ.

IAS/KAS Academy



## ❖ ಇರಾನ್ ಬಂದರುಗಳ ಮೇಲಿನ ದಿಗ್ಬಂಧನ ಮುಂದುವರಿಕೆ: ಅಮೆರಿಕ ಹೊರ್ಮುಜ್ ದಾಟಲು ಯತ್ನಿಸಿದ ಹಡಗುಗಳ ಮೇಲೆ ಇರಾನ್ ದಾಳಿ: ಕದನ ವಿರಾಮ ವಿಸ್ತರಿಸಿದ ಟ್ರಂಪ್


**ಸಂದರ್ಭ: ಇರಾನ್ ವಿರುದ್ಧದ ಎರಡು ವಾರಗಳ ಕದನ ವಿರಾಮ ಮುಕ್ತಾಯಗೊಳ್ಳುವ ಕೆಲವೇ ಗಂಟೆಗಳ ಮುನ್ನ, ಕದನ ವಿರಾಮವನ್ನು ಅನಿರ್ದಿಷ್ಟಾವಧಿಗೆ ವಿಸ್ತರಿಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಅದನ್ನು ಇರಾನ್ ಒಪ್ಪಿಕೊಂಡಿದೆ.**

- ಈ ಮೂಲಕ ಏಳು ವಾರಗಳಿಂದ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸಲು ಇರಾನ್‌ಗೆ ಒಮ್ಮತದ ಪ್ರಸ್ತಾವ ಮಂಡಿಸಲು ಅಮೆರಿಕ ಇನ್ನಷ್ಟು ಸಮಯಾವಕಾಶ ಕಲ್ಪಿಸಿದೆ. ಮಧ್ಯವರ್ತಿ ಪಾಕಿಸ್ತಾನದ ಕೋರಿಕೆಯ ಮೇರೆಗೆ ಕದನ ವಿರಾಮ ವಿಸ್ತರಿಸಲು ಒಪ್ಪಿಕೊಂಡಿದ್ದಾಗಿ ಟ್ರಂಪ್ ಹೇಳಿದ್ದಾರೆ. 'ಎರಡನೇ ಸುತ್ತಿನ ಶಾಂತಿ ಮಾತುಕತೆ ಶುಕ್ರವಾರ ಪ್ರಾರಂಭವಾಗಬಹುದು' ಎಂದೂ ಅವರು ಹೇಳಿದ್ದಾರೆ.
- ಕದನ ವಿರಾಮ ವಿಸ್ತರಣೆಯ ಘೋಷಣೆ ಹೊರಬಿದ್ದ ಕೆಲ ಕ್ಷಣಗಳಲ್ಲಿಯೇ ಹೊರ್ಮುಜ್ ಜಲಸಂಧಿ ದಾಟಲು ಯತ್ನಿಸಿದ ಮೂರು ಹಡಗುಗಳನ್ನು ಗುರಿಯಾಗಿಸಿ ಇರಾನ್ ದಾಳಿ ನಡೆಸಿದ್ದು, ಅವುಗಳಲ್ಲಿ ಎರಡನ್ನುವಶಕ್ಕೆ ಪಡೆದಿದೆ. ಇದು ಕದನ ವಿರಾಮಮತ್ತು ಶಾಂತಿ ಮಾತುಕತೆ ಕುರಿತುಅನಿಶ್ಚಿತತೆ ಮೂಡುವಂತೆ ಮಾಡಿದೆಎಂದು ವಿಶ್ಲೇಷಿಸಲಾಗುತ್ತಿದೆ.
- 'ತನ್ನ ಪ್ರದೇಶದಲ್ಲಿ ಉಳಿದಿರುವ ಆಸ್ತಿಯ ರಕ್ಷಣೆಗಾಗಿ ಶತ್ರುಗಳ ವಿರುದ್ಧ ಕಲ್ಪನೆಗೂ ಮೀರಿದ ಹೊಡೆತಗಳನ್ನು ನೀಡುತ್ತೇವೆ' ಎಂದು ಐಆರ್‌ಜಿಸಿ ಬುಧವಾರ ಆಕ್ರೋಶ ವ್ಯಕ್ತಪಡಿಸಿದೆ.

**<u>ಭಾರತದತ್ತ ಸಾಗುತ್ತಿದ್ದ ಹಡಗಿನ ಮೇಲೂ ದಾಳಿ</u>**

- ಇರಾನ್ ದಾಳಿ ನಡೆಸಿ ವಶಪಡಿಸಿಕೊಂಡಿರುವ ಹಡಗುಗಳಲ್ಲಿ ಒಂದು ಭಾರತದತ್ತ ಸಾಗುತ್ತಿತ್ತು ಎಂದು ಗೊತ್ತಾಗಿದೆ.
- ಮೂರು ಹಡಗುಗಳು ಲೈಬೀರಿಯಾ ಧ್ವಜ ಹೊಂದಿದ್ದ ಎಪಾಮಿನೊಂಡಾಸ್, ಪನಾಮ ಧ್ವಜ ಹೊಂದಿದ್ದ ಎಂಎಸ್‌ಸಿ ಫ್ರಾನ್ಸೆಸ್ಕಾ, ಯುಫೋರಿಯಾ ಎಂದು ಬಿಬಿಸಿ ಮತ್ತು ಇರಾನ್ ಮಾಧ್ಯಮ ಗುರುತಿಸಿವೆ. ಇದರಲ್ಲಿ ಎಪಾಮಿನೊಂಡಾಸ್ ಗುಜರಾತಿನ ಮುಂದ್ರಾ ಬಂದರಿನತ್ತ ತೆರಳುತ್ತಿತ್ತು ಎಂದು ಮೂಲಗಳು ತಿಳಿಸಿವೆ.
- ಕಂಟೇನರ್‌ಗಳಿದ್ದ ಈ ಹಡಗುಗಳ ಮೇಲೆ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ದಾಳಿ ಮಾಡಿ, ಹಾನಿಗೊಳಿಸಿದೆ. ಆದರೆ ಯಾವುದೇ ಸಿಬ್ಬಂದಿಗೆ ಗಾಯಗಳಾಗಿಲ್ಲ ಎಂದು 'ದಿ ಯುನೈಟೆಡ್ ಕಿಂಗ್ ಡಮ್ ಮೇರಿಟೈಮ್ ಟ್ರೇಡ್ ಆರ್ಗನೈಸೇಷನ್ ಹೇಳಿದೆ.

Dr. Rajkumar IAS/KAS Academy



# ಇ85 ಇಂಧನ ಬಿಕ್ಕಟ್ಟಿಗೆ ಪರಿಹಾರವಾಗುವುದೇ?

## ಶೇ 85ರಷ್ಟು ಎಥನಾಲ್ ಬಳಕೆಗೆ ಕೇಂದ್ರದಿಂದ ಕರಡು ನಿಯಮ ಸಾಧ್ಯತೆ

ಶೇ 85ರಿಂದ 90ರಷ್ಟು ಕಚ್ಚಾ ತೈಲ, ಅನಿಲವನ್ನು ಆಮದು ಮಾಡಿಕೊಳ್ಳುವ ಭಾರತದ ಇಂಧನ ಭದ್ರತೆಗೆ ಪಶ್ಚಿಮ ಏಷ್ಯಾದ ಬಿಕ್ಕಟ್ಟು ಹೊಡೆತ ನೀಡಿದೆ. ಕಚ್ಚಾ ತೈಲದಿಂದ ಉತ್ಪಾದಿಸುವ ಇಂಧನಗಳಿಗೆ ಪರ್ಯಾಯವಾದ ಮತ್ತು ಪರಿಸರಸ್ನೇಹಿಯಾದ ಇಂಧನಗಳ ಬಳಕೆಯ ಬಗ್ಗೆ ದೇಶವು ಯೋಚನೆ ಮಾಡುವಂತೆ ಆಗಿದೆ. ಈಗಾಗಲೇ ಬಳಕೆಯಲ್ಲಿರುವ ಶೇ20ರಷ್ಟು ಎಥನಾಲ್ ಮಿಶ್ರಣ ಮಾಡಿರುವ ಪೆಟ್ರೋಲ್ ಮಾದರಿಯಲ್ಲಿ ಶೇ 85ರಷ್ಟು ಎಥೆನಾಲ್ ಬೆರೆಸಿರುವ ಪೆಟ್ರೋಲ್ (ಇ85 ಪೆಟ್ರೋಲ್) ಬಳಕೆಗೆ ಪೂರಕವಾದ ಕರಡು ನಿಯಮಗಳನ್ನು ಕೇಂದ್ರ ಸರ್ಕಾರ ಶೀಘ್ರದಲ್ಲಿ ಪ್ರಕಟಿಸಲಿದೆ ಎಂದು ಹೇಳಲಾಗಿದೆ. ಇದು ಪಳೆಯುಳಿಕೆ ಇಂಧನದ ಬಳಕೆಯನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಿ, ಇಂಧನಕ್ಕಾಗಿ ವಿದೇಶಗಳ ಅವಲಂಬನೆಯನ್ನು ತಗ್ಗಿಸಬಹುದು ಎಂಬ ನಿರೀಕ್ಷೆಯಲ್ಲಿ ಸರ್ಕಾರ ಇದೆ

### ಈಡೇರುವುದೇ ಉದ್ದೇಶ?

ಭಾರತ ಪ್ರತಿ ವರ್ಷ ₹22 ಲಕ್ಷ ಕೋಟಿ ಮೌಲ್ಯದ ಇಂಧನವನ್ನು ಆಮದು ಮಾಡಿಕೊಳ್ಳುತ್ತದೆ. ಎಥೆನಾಲ್ ನೀತಿಯಿಂದ 10 ವರ್ಷಗಳಲ್ಲಿ (2015–2025) ₹1.06 ಲಕ್ಷ ಕೋಟಿ ಮೌಲ್ಯದ ಕಚ್ಚಾ ತೈಲ ಆಮದು ಕಡಿಮೆಯಾಗಿದೆ ಮತ್ತು 5.44 ಕೋಟಿ ಟನ್ ಇಂಗಾಲ ಹೊರಸೂಸುವಿಕೆ ತಪ್ಪಿಸಲಾಗಿದೆ ಎಂದು ಕೇಂದ್ರ ಹೇಳಿದೆ.

ಆದರೆ, ಈ ಅವಧಿಯಲ್ಲಿ ಎಥೆನಾಲ್ ತಯಾರಿಕೆಗಾಗಿ ಜನ–ಜಾನುವಾರುಗಳಿಗೆ ಬಳಕೆ ಆಗಬೇಕಿದ್ದ ದಾಖಲೆ ಪ್ರಮಾಣದ ಕಬ್ಬು, ಜೋಳ ಮತ್ತು ಅಕ್ಕಿ ಬಳಸಲಾಗಿದೆ. ಧಾನ್ಯ ಬೆಳೆಯಲು ಬಳಕೆಯಾಗುತ್ತಿದ್ದ ಭೂಮಿಯನ್ನು ಅದಕ್ಕಾಗಿ ಬಳಸಲಾಗಿದೆ ಎನ್ನುವ ವಿಶ್ಲೇಷಣೆಯೂ ಇದೆ.

ಎಥೆನಾಲ್ ತಯಾರಿಕೆಗಾಗಿ ಬಳಸುವ ಕಚ್ಚಾ ವಸ್ತುಗಳನ್ನು ಬೆಳೆಯುವುದು ಮತ್ತು ಅವುಗಳನ್ನು ಬಳಸಿ ಎಥೆನಾಲ್ ತಯಾರಿಸುವ ಪ್ರಕ್ರಿಯೆಯಲ್ಲಿ ಇಂಗಾಲದಂಥ ವಸ್ತುಗಳು ಹೆಚ್ಚು ಹೊರಸೂಸುತ್ತವೆ. ಅವುಗಳ ಪ್ರಮಾಣವು ವಾಹನಗಳಲ್ಲಿ ತೈಲ ಬಳಸಿದಾಗ ಹೊರಸೂಸುವ ಇಂಗಾಲದ ಪ್ರಮಾಣಕ್ಕಿಂತಲೂ ಹೆಚ್ಚು ಎಂದು ಅಮೆರಿಕದ ಕೃಷಿ ಇಲಾಖೆಯ ಧನಸಹಾಯದೊಂದಿಗೆ ನಡೆದ ಅಧ್ಯಯನ ಮತ್ತು ರಾಯಲ್ ಸೊಸೈಟಿಯ ಅಧ್ಯಯನಗಳು ತಿಳಿಸಿವೆ.

### ಬದಲಾಗಬೇಕು ಮೂಲಸೌಕರ್ಯ

ದೇಶದಲ್ಲಿ ಇ85 ಪೆಟ್ರೋಲ್ ಬಳಕೆ ಆರಂಭಿಸಬೇಕಾದರೆ, ವಾಹನಗಳು ಮತ್ತು ಇಂಧನ ಕ್ಷೇತ್ರದ ಮೂಲಸೌಕರ್ಯಗಳಲ್ಲಿ ಆಮೂಲಾಗ್ರ ಬದಲಾವಣೆ ತರುವ ಅಗತ್ಯವಿದೆ. ಹಾಗಾಗಿ, ಈಗ ನೀತಿ ರೂಪಿಸಿದರೂ ಅದರ ಜಾರಿಗೆ ಕೆಲವು ವರ್ಷಗಳು ಬೇಕಾಗುತ್ತವೆ.

ನಮ್ಮ ದೇಶದಲ್ಲಿ ಈಗ ತಯಾರಾಗುತ್ತಿರುವ ವಾಹನಗಳು ಇ85 ಪೆಟ್ರೋಲ್ ಬಳಸುವ ಸಾಮರ್ಥ್ಯ ಹೊಂದಿಲ್ಲ. ಅದಕ್ಕಾಗಿ ಪ್ರತ್ಯೇಕ ಎಂಜಿನ್‌ಗಳನ್ನೇ ವಾಹನ ಕಂಪನಿಗಳು ತಯಾರಿಸಬೇಕು. ಇಂಧನ ಶ್ರೇಣಿಯ ಎಥೆನಾಲ್ ತಯಾರಿಕಾ ಘಟಕಗಳು, ಪೆಟ್ರೋಲ್‌ಗೆ ಮಿಶ್ರಣ ಮಾಡುವ ಘಟಕಗಳ ಮೂಲಸೌಕರ್ಯಗಳನ್ನೂ ಬದಲಿಸಬೇಕಾಗುತ್ತದೆ. ಆಲ್ಕೋಹಾಲ್ ಪ್ರಮಾಣ ಹೆಚ್ಚಾಗಿರುವುದರಿಂದ ಪೆಟ್ರೋಲ್ ಬಂಕ್‌ಗಳಲ್ಲಿ ಅದರ ದಾಸ್ತಾನು, ಸಾಗಣೆ, ಸುರಕ್ಷತಾ ವ್ಯವಸ್ಥೆ ಸೇರಿದಂತೆ ಬಹುತೇಕ ಎಲ್ಲ ಮೂಲಸೌಕರ್ಯಗಳನ್ನೂ ಮೇಲ್ದರ್ಜೆಗೆ ಏರಿಸಬೇಕಾಗುತ್ತದೆ.

### ರೈತರ ವಿರೋಧ

ಪೆಟ್ರೋಲ್‌ನಲ್ಲಿ ಎಥೆನಾಲ್ ಪ್ರಮಾಣವನ್ನು ಹೆಚ್ಚಿಸುವ ಪ್ರಸ್ತಾವಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ. ಪ್ರಸ್ತಾವಿತ ಎಥೆನಾಲ್ ತಯಾರಿಕೆಯು ನೀರು, ಭೂಮಿ ಮತ್ತು ಜನರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ರೈತರು ವಾದಿಸುತ್ತಿದ್ದಾರೆ.

ರಾಜಸ್ಥಾನದ ಟಿಬ್ಬಿಯಲ್ಲಿ ಎಥೆನಾಲ್ ತಯಾರಿಕಾ ಘಟಕ ಆರಂಭಿಸಲು ಸರ್ಕಾರ ಮುಂದಾಗಿದ್ದು, ರೈತರು ಅದಕ್ಕೆ ಭಾರಿ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಎಥೆನಾಲ್ ತಯಾರಿಕಾ ಘಟಕವು ಅಪಾರ ಪ್ರಮಾಣದಲ್ಲಿ ನೀರನ್ನು ಬಳಸುವುದಲ್ಲದೇ, ಅಂತರ್ಜಲವನ್ನೂ ಮಲಿನಗೊಳಿಸುತ್ತದೆ ಎಂದು ರೈತರು ಆರೋಪಿಸಿದ್ದಾರೆ. ರೈತರ ನಿಯೋಗವು ಪಂಜಾಬ್‌ಗೆ ಹೋಗಿ ಅಲ್ಲಿದ್ದ ಎಥೆನಾಲ್ ತಯಾರಿಕಾ ಘಟಕದಿಂದ ಆಗುತ್ತಿರುವ ಪರಿಣಾಮಗಳನ್ನು ಅಧ್ಯಯನ ಮಾಡಿದ್ದರು. ಪಂಜಾಬ್‌ನಲ್ಲಿ ರೈತರ ಪ್ರತಿಭಟನೆಗಳಿಗೆ ಮಣಿದು ಎಥೆನಾಲ್ ತಯಾರಿಕಾ ಘಟಕವನ್ನು ಬಂದ್ ಮಾಡಲಾಗಿತ್ತು. ಅದೇ ರೀತಿ ರಾಜಸ್ಥಾನದಲ್ಲಿಯೂ ಘಟಕವನ್ನು ಮುಚ್ಚಬೇಕೆಂದು ರೈತರು ಆಗ್ರಹಿಸುತ್ತಿದ್ದಾರೆ.

• ಸೂರ್ಯನಾರಾಯಣ ವಿ., ಶ್ರೀನಾಥ್ ಬಿ.ವಿ.

ಪಶ್ಚಿಮ ಏಷ್ಯಾದಲ್ಲಿ ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದಿಂದಾಗಿ ಭಾರತದ ಇಂಧನ ಭದ್ರತೆಗೆ ದೊಡ್ಡ ಸವಾಲು ಎದುರಾಗಿರುವ ಬೆನ್ನಲ್ಲೇ ಕೇಂದ್ರ ಸರ್ಕಾರವು ಸಸ್ಯಜನ್ಯವಾದ ಎಥೆನಾಲ್ ಅನ್ನು ಹೆಚ್ಚಿನ ಪ್ರಮಾಣದಲ್ಲಿ ಬೆರೆಸಿರುವ ಪೆಟ್ರೋಲ್ ಬಳಕೆಗೆ ಉತ್ತೇಜನ ನೀಡಲು ಮುಂದಾಗಿದೆ. ಈಗಾಗಲೇ ಶೇ 20ರಷ್ಟು ಎಥೆನಾಲ್ ಮಿಶ್ರಣ ಮಾಡಿದ ಪೆಟ್ರೋಲ್ (ಇ20) ದೇಶದಲ್ಲಿ ಬಳಕೆಯಲ್ಲಿದ್ದು, ಎಥೆನಾಲ್ ಮಿಶ್ರಣವನ್ನು ಶೇ 85ಕ್ಕೆ ಏರಿಸಲು ಕೇಂದ್ರ ಸರ್ಕಾರ ಯೋಚಿಸುತ್ತಿದೆ. ಇ85 ಪೆಟ್ರೋಲ್‌ಗೆ ಸಂಬಂಧಿಸಿದಂತೆ ಕರಡು ನಿಯಮಗಳನ್ನು ಅದು ಶೀಘ್ರದಲ್ಲಿ ಪ್ರಕಟಿಸಲಿದೆ ಎಂದು ವರದಿಯಾಗಿದೆ.

ಇಂಧನಕ್ಕಾಗಿ ವಿದೇಶಿ ಅವಲಂಬನೆಯನ್ನು ಕಡಿಮೆ ಮಾಡುವುದರ ಜೊತೆಗೆ, ದೇಶದಲ್ಲಿ ಪರಿಸರಸ್ನೇಹಿ ಇಂಧನ ಬಳಕೆಗೆ ಪ್ರೋತ್ಸಾಹ ನೀಡುವುದು ಕೇಂದ್ರದ ಉದ್ದೇಶ. ಇದಕ್ಕೆ ಪೂರಕ ಎಂಬಂತೆ ನವದೆಹಲಿಯಲ್ಲಿ ಮಂಗಳವಾರ ಮಾತನಾಡಿದ್ದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು, 'ಇಂಧನ ಕ್ಷೇತ್ರದಲ್ಲಿ ಭಾರತವು ಸ್ವಾವಲಂಬಿಯಾಗುವ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಶೇ 100ರಷ್ಟು ಎಥೆನಾಲ್ ಬಳಕೆಯತ್ತ ದೇಶ ಗಮನಹರಿಸಬೇಕು' ಎಂದು ಹೇಳಿದ್ದಾರೆ.

### ಇ20 ಪೆಟ್ರೋಲ್

ಕೇಂದ್ರದ ರಾಷ್ಟ್ರೀಯ ಜೈವಿಕ ಇಂಧನ ನೀತಿಯು ಸಸ್ಯಜನ್ಯ ಎಥೆನಾಲ್ ಅನ್ನು ಪೆಟ್ರೋಲ್‌ನೊಂದಿಗೆ ಬೆರೆಸುವುದಕ್ಕೆ ಪ್ರೋತ್ಸಾಹ ನೀಡುತ್ತಿದೆ. ದೇಶದಲ್ಲಿ ಎರಡು ದಶಕಗಳಿಂದ ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಸಲಾಗುತ್ತಿದೆ. ಮಿಶ್ರಣದ ಪ್ರಮಾಣವನ್ನು ಹಂತ ಹಂತವಾಗಿ (ಶೇ 5, ಶೇ 10) ಹೆಚ್ಚಿಸಲಾಗಿದೆ. 2008–09ರಿಂದ ಈ ಪ್ರಕ್ರಿಯೆ ಆರಂಭವಾಗಿದ್ದು, ಕಳೆದ ವರ್ಷದಿಂದ ಶೇ 20ರಷ್ಟು ಎಥೆನಾಲ್ ಮಿಶ್ರಣ ಮಾಡಿದ ಪೆಟ್ರೋಲ್ ಅನ್ನೇ ದೇಶದಾದ್ಯಂತ ಪೂರೈಸಲಾಗುತ್ತಿದೆ. ಇ20 ಪೆಟ್ರೋಲ್ ನೀತಿ 2022ರಿಂದ ಜಾರಿಗೆ ಬಂದಿದೆ.

2023ರಲ್ಲಿ ಇ20 ಪೆಟ್ರೋಲ್‌ಗೆ ಚಾಲನೆ ನೀಡಲಾಗಿದೆ (ಆರಂಭದಲ್ಲಿ ಎಥೆನಾಲ್ ಮಿಶ್ರಣದ ಪ್ರಮಾಣ ಶೇ 14.06 ಇತ್ತು). ಈ ತಿಂಗಳ 1ರಿಂದ ದೇಶದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೆಟ್ರೋಲ್ ಬಂಕ್‌ಗಳಲ್ಲಿ ಇ20 ಪೆಟ್ರೋಲ್ ಮಾತ್ರ ಲಭ್ಯವಿರುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ನೀತಿಯ ಪ್ರಕಾರ, ಪೆಟ್ರೋಲ್‌ಗೆ ಬೆರೆಸುವ ಎಥೆನಾಲ್ ಪ್ರಮಾಣವನ್ನು ಶೇ 27ರವರೆಗೂ ಹೆಚ್ಚಿಸಬಹುದು.

ಭಾರತವು 2030ರ ಒಳಗೆ ಶೇ 20ರಷ್ಟು ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಸುವ ಗುರಿಯನ್ನು ಹೊಂದಿತ್ತು. ಐದು ವರ್ಷ ಮುಂಚಿತವಾಗಿಯೇ ಅದನ್ನು ಸಾಧಿಸಿದೆ.

ಇ85 ಪೆಟ್ರೋಲ್ ಎಂದರೆ, ಅದರಲ್ಲಿ ಪೆಟ್ರೋಲ್ ಶೇ 15ರಷ್ಟು ಇದ್ದರೆ, ಉಳಿದ ಶೇ 85ರಷ್ಟು ಎಥೆನಾಲ್ ಇರುತ್ತದೆ. ಕೇಂದ್ರ ಸರ್ಕಾರವು ಇ20 ಮಾದರಿಯಲ್ಲಿ, ಇ85 ಪೆಟ್ರೋಲ್ ಅನ್ನು ಪ್ರತ್ಯೇಕ ವರ್ಗವಾಗಿ ಮಾರಾಟ ಮಾಡಲು ಯೋಚಿಸುತ್ತಿದೆ ಎಂದು ಹೇಳಲಾಗಿದೆ

### ಕಾರ್ಯಕ್ಷಮತೆಗೆ ಹೊಡೆತ

ಇ20 ಪೆಟ್ರೋಲ್ ಬಳಕೆ ಆರಂಭಗೊಂಡ ನಂತರ ಹಳೆಯ ಪೆಟ್ರೋಲ್ ವಾಹನಗಳ ಕಾರ್ಯಕ್ಷಮತೆ ಕುಸಿದಿರುವ, ಎಂಜಿನ್‌ಗಳಿಗೆ ಹಾನಿಯಾಗುತ್ತಿರುವ ಬಗ್ಗೆ ಈಗಲೂ ಚರ್ಚೆ ನಡೆಯುತ್ತಿದೆ. ಎಂಜಿನ್‌ನಲ್ಲಿ ಬಳಸುವ ಗ್ಯಾಸ್ಕೆಟ್ ಹಾಗೂ ಕೆಲವು ರಬ್ಬರ್ ಬಿಡಿ ಭಾಗಗಳನ್ನು ಬದಲಿಸಿದರೆ, ಈ ಸಮಸ್ಯೆಯನ್ನು ಬಗೆಹರಿಸಬಹುದು ಎಂದು ಕೇಂದ್ರ ಸರ್ಕಾರ ಹೇಳಿದರೂ, 2023ಕ್ಕಿಂತಲೂ ಮೊದಲು ತಯಾರಾದ ವಾಹನಗಳ ಮಾಲೀಕರು, ಚಾಲಕರು ಈಗಲೂ ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. 2023ರ ನಂತರ ತಯಾರಾದ ವಾಹನಗಳು, ಇ20 ಪೆಟ್ರೋಲ್ ಬಳಕೆಗೆ ಅರ್ಹವಾಗಿವೆ.

ಹೆಚ್ಚಿನ ಪ್ರಮಾಣದಲ್ಲಿ ಎಥೆನಾಲ್ ಬೆರೆಸಿರುವ ಪೆಟ್ರೋಲ್ ಬಳಸಬೇಕಾದರೆ, ಅದಕ್ಕೆ ಸರಿ ಹೊಂದುವ ಎಂಜಿನ್‌ಗಳ ಅಗತ್ಯವಿದೆ. ಶೇ 5, ಶೇ 10ರಷ್ಟು ಎಥೆನಾಲ್ ಮಿಶ್ರಿತ ಪೆಟ್ರೋಲ್ ಲಭ್ಯವಿದ್ದಾಗ ಕಾರುಗಳ ಮೈಲೇಜ್ ಕಡಿಮೆಯಾಗುವುದಾಗಲೀ, ಎಂಜಿನ್‌ಗೆ ತುಕ್ಕು ಹಿಡಿಯುವುದಾಗಲಿ ಮುಂತಾದ ತೊಂದರೆ ಕಂಡುಬಂದಿರಲಿಲ್ಲ. ಆದರೆ, ಎಥೆನಾಲ್ ಮಿಶ್ರಣದ ಪ್ರಮಾಣವನ್ನು ಶೇ 20ಕ್ಕೆ ಏರಿಸಿದಾಗ ಈ ಸಮಸ್ಯೆ ಉಂಟಾಗಿತ್ತು. ಇ20 ಪೆಟ್ರೋಲ್ ಪೂರೈಕೆ ಆರಂಭವಾಗಿ ವರ್ಷ ಕಳೆದರೂ ಇದಕ್ಕೆ ಪೂರ್ಣ ಪರಿಹಾರ ಸಿಕ್ಕಿಲ್ಲ.

### ಇ85 ಹೊಸದಲ್ಲ

ಶೇ 85ರಷ್ಟು ಎಥೆನಾಲ್ ಮಿಶ್ರಣದ ಪೆಟ್ರೋಲ್‌ನ ಪರಿಕಲ್ಪನೆ ಹೊಸದೇನಲ್ಲ. ಅಮೆರಿಕ, ಯುರೋಪಿನ ಹಲವು ರಾಷ್ಟ್ರಗಳಲ್ಲಿ ಇದು ಈಗಾಗಲೇ ಬಳಕೆಯಲ್ಲಿದೆ. ಶೇ 100ರ ಎಥೆನಾಲ್ ಮಿಶ್ರಿತ, ಅಂದರೆ ಇ100 ಪೆಟ್ರೋಲ್ ಅನ್ನು ಬಳಸುವ ರಾಷ್ಟ್ರಗಳಿವೆ. ಬ್ರೆಜಿಲ್‌ನಲ್ಲಿ ಇ100 ಪೆಟ್ರೋಲ್ ಬಳಸುವ ಕಾರುಗಳು ದೊಡ್ಡ ಸಂಖ್ಯೆಯಲ್ಲಿವೆ.

ಆದರೆ, ಸಾಮಾನ್ಯ ಪೆಟ್ರೋಲ್ ಎಂಜಿನ್ ಹೊಂದಿರುವ ಕಾರುಗಳಲ್ಲಿ ಈ ಪೆಟ್ರೋಲ್ ಅನ್ನು ಬಳಸಲು ಸಾಧ್ಯವಿಲ್ಲ. ಈ ಇಂಧನವನ್ನು ಬಳಸಲು ಪ್ರತ್ಯೇಕ ಎಂಜಿನ್‌ಗಳು ಬೇಕು. ಇವುಗಳನ್ನು ಫ್ಲೆಕ್ಸ್–ಫ್ಯುಯಲ್ ಎಂಜಿನ್‌ಗಳು ಎನ್ನಲಾಗುತ್ತದೆ. ಇವುಗಳು ಪೆಟ್ರೋಲ್, ಇ85, ಇ100 ಪೆಟ್ರೋಲ್ ಬಳಸುವ ಸಾಮರ್ಥ್ಯವನ್ನು ಹೊಂದಿವೆ.

ಆಧಾರ: ಪಿಟಿಐ, ರಾಯಿಟರ್ಸ್, ಪಿಐಬಿ, ಮಾಧ್ಯಮ ವರದಿಗಳು

### ತಯಾರಿಕೆ ಹೇಗೆ?

ಎಥೆನಾಲ್ ಅನ್ನು ಮುಖ್ಯವಾಗಿ ಜೋಳ, ಧಾನ್ಯಗಳು ಮತ್ತು ಕಬ್ಬಿನಿಂದ ತಯಾರಿಸಲಾಗುತ್ತದೆ; ವಿವಿಧ ಆಹಾರ ಧಾನ್ಯಗಳು, ಕಾಳು, ಮನುಷ್ಯರು ಸೇವನೆ ಮಾಡಲು ಅರ್ಹವಲ್ಲದ ಅಕ್ಕಿ, ಜೋಳ, ಕಬ್ಬಿನ ಹಾಲು, ಕಾಕಂಬಿ, ಕೃಷಿ ತ್ಯಾಜ್ಯವನ್ನು ಬಳಸಿ ಎಥೆನಾಲ್ ತಯಾರಿಸಲಾಗುತ್ತದೆ.

ಪೆಟ್ರೋಲ್‌ಗೆ ಹೋಲಿಸಿದರೆ ಎಥೆನಾಲ್ ತಯಾರಿಕಾ ವೆಚ್ಚವೂ ಹೆಚ್ಚು. ಜೋಳದಿಂದ ಒಂದು ಲೀಟರ್ ಎಥೆನಾಲ್ ತಯಾರಿಸಲು ₹71ರವರೆಗೂ ವೆಚ್ಚವಾಗುತ್ತದೆ.

ಪೆಟ್ರೋಲ್ ಜತೆಗೆ ಎಥೆನಾಲ್ ಅನ್ನು ಬೆರೆಸುವುದನ್ನು ನಿರಂತರವಾಗಿ ಮುಂದುವರಿಸಲು ಹೆಚ್ಚು ಜೋಳ ಬೆಳೆಯಬೇಕು. ಅದಕ್ಕಾಗಿ 2030ರ ಹೊತ್ತಿಗೆ ದೇಶದಲ್ಲಿ ಹೆಚ್ಚುವರಿಯಾಗಿ 40 ಲಕ್ಷ ಹೆಕ್ಟೇರ್‌ನಿಂದ 80 ಲಕ್ಷ ಹೆಕ್ಟೇರ್‌ಗಳಷ್ಟು ಹೆಚ್ಚುವರಿ ಭೂಮಿಯಲ್ಲಿ ಜೋಳ ಬೆಳೆಯಬೇಕು ಎಂದು ಬೆಂಗಳೂರಿನ ಸೆಂಟರ್ ಫಾರ್ ಸೈನ್ಸ್, ಟೆಕ್ನಾಲಜಿ ಮತ್ತು ಪಾಲಿಸಿ ಎನ್ನುವ ಚಿಂತಕರ ಚಾವಡಿ ಹೇಳಿದೆ.

Publication Date 23/04/2026

## ❖ ಧಾರ್ಮಿಕ ಆಚರಣೆಗಳು ಅಗತ್ಯವೇ? ಮಾನದಂಡಗಳ ವ್ಯಾಖ್ಯಾನ ಕಷ್ಟ: ಸುಪ್ರೀಂ ಕೋರ್ಟ್

**ಸಂದರ್ಭ: ಯಾವುದೇ ಒಂದು ನಿರ್ದಿಷ್ಟ ವಿಧಿ, ಧಾರ್ಮಿಕ ಆಚರಣೆಗಳ ಅಗತ್ಯ ಅಥವಾ ಅನಗುತ್ತ ಭಾಗ ಎಂಬುದಾಗಿ ಗುರುತಿಸುವುದಕ್ಕೆ ಬೇಕಾದ ಮಾನದಂಡಗಳ ವ್ಯಾಖ್ಯಾನವು ನ್ಯಾಯಾಂಗಕ್ಕೆ ಅಸಾಧ್ಯವಲ್ಲದಿದ್ದರೂ, ಬಹಳ ಕಷ್ಟಕರ ಸಂಗತಿ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.**

- 'ಹಿಂದೂಗಳ ಒಂದು ನಿರ್ದಿಷ್ಟ ಧಾರ್ಮಿಕ ವಂಗಡ ಕೆಲವು ಸಂಪ್ರದಾಯಗಳನ್ನು ಪಾಲನೆ ಮಾಡುತ್ತಿದ್ದಲ್ಲಿ ಹಾಗೂ ಅವುಗಳು ನೈತಿಕತೆ, ಸಾರ್ವಜನಿಕ ವ್ಯವಸ್ಥೆ ಹಾಗೂ ಆರೋಗ್ಯಕ್ಕೆ ಧಕ್ಕೆ ತರುವಂತಿದ್ದಲ್ಲಿ ಅಂತಹ ಆಚರಣೆಗಳನ್ನು ಅಗತ್ಯ ಧಾರ್ಮಿಕ ವಿಧಿಗಳೆಂದು ಹೇಳಲಾಗದು' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತಿ ನೇತೃತ್ವಧ ಒಂಬತ್ತು ಸದಸ್ಯರ ಸಂವಿಧಾನ ಪೀಠ ಹೇಳಿದೆ.
- ಯಾವುದೇ ಒಂದು ಧರ್ಮದವರು ಅನುಸರಿಸುವ ಧಾರ್ಮಿಕ ಆಚರಣೆಗಳು ನೈತಿಕತೆ, ಸಾರ್ವಜನಿಕ ವ್ಯವಸ್ಥೆ ಹಾಗೂ ಆರೋಗ್ಯಕ್ಕೆ ಹಾನಿ ಉಂಟು ಮಾಡದೇ ಇದ್ದರೆ, ಅಂತಹ ಆಚರಣೆಗಳಿಗೆ ಸಂವಿಧಾನದಡಿ ರಕ್ಷಣೆ ಇದೆ. ಆದರೆ, ಯಾವುದೇ ಆಚರಣೆಯು 'ಅಗತ್ಯ' ಎಂಬ ಉಲ್ಲೇಖ ಸಂವಿಧಾನದಲ್ಲಿಲ್ಲ ಎಂದೂ ಪೀಠ ಹೇಳಿದೆ.

- ಶಬರಿಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನ ಸೇರಿ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರನ್ನು ತಾರತಮ್ಯದಿಂದ ನೋಡಲಾಗುತ್ತಿದೆ ಎಂಬುದಕ್ಕೆ ಸಂಬಂಧಿಸಿದ ಅರ್ಜಿಗಳ ಕುರಿತು ಏಳನೇ ದಿನವೂ ನಡೆದ ವಿಚಾರಣೆ ವೇಳೆ ಪೀಠ ಈ ಮಾತು ಹೇಳಿದೆ.
- ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ, ಎಂ.ಎಂ.ಸುಂದ್ರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ ಕುಮಾರ್, ಆಗಸ್ಟಿನ್ ಜಾರ್ಜ್ ಮಸೀಹ್, ಪ್ರಸನ್ನ ಬಿ.ವರಾಳೆ, ಆರ್.ಮಹಾದೇವನ್ ಹಾಗೂ ಜಾಯ್‌ಮಾಲಾ ಬಾಗ್ಚಿ ಈ ಪೀಠದಲ್ಲಿದ್ದಾರೆ.
- ಮಧ್ಯಸ್ಥಿಕದಾರರ ಪರ ಹಾಜರಿದ್ದ ಹಿರಿಯ ವಕೀಲ ರಾಕೇಶ್ ದ್ವಿವೇದಿ. ಒಂದು ಪಂಗಡ ಅನುಸರಿಸುವ ಸಿದ್ಧಾಂತ ಅಥವಾ ನಂಬಿಕೆಗಳ ಆಧಾರದಲ್ಲಿ ಧರ್ಮವನ್ನು ವ್ಯಾಖ್ಯಾನಿಸಲಾಗದು ಹೇಗೆ ಪೂಜಿಸಬೇಕು ಮತ್ತು ಯಾವಾಗ ಪೂಜಿಸಬೇಕು ಎಂಬುದನ್ನು ಆ ಧಾರ್ಮಿಕ ಆಚರಣೆಗಳಲ್ಲಿ ನಂಬಿಕೆವುಳ್ಳವರೇ ನಿರ್ಧರಿಸಬೇಕು. ಹೀಗಾಗಿ, ದಯವಿಟ್ಟು ಈ ವಿಷಯದಲ್ಲಿ ಹೊಸ ವಿಚಾರಗಳನ್ನು ತರಬಾರದು ಅಥವಾ ಹಳೆಯದನ್ನು ಬದಲಾಯಿಸಬಾರದು' ಎಂದು ಪೀಠಕ್ಕೆ ಅರುಹಿದರು.
- 'ಇಂತಹ ವಿಚಾರವನ್ನು ಒಂದು ಸಾಧನವನ್ನಾಗಿ ಬಳಸಬಾರದು. ಹೀಗಾಗದಲ್ಲಿ ಅದು ಭವಿಷ್ಯದಲ್ಲಿ ಸಮಸ್ಯೆಗಳನ್ನು ಸೃಷ್ಟಿಸುತ್ತದೆ ದೇವರನ್ನು ಹೇಗೆ ಆರಾಧಿಸಬೇಕು ಎಂಬ ಬಗ್ಗೆ, ನಿರ್ಧಾರ ಕೈಗೊಳ್ಳುವುದನ್ನು ಆಯಾ ಧಾರ್ಮಿಕ ಪಂಗಡಗಳಿಗೇ ಬಿಟ್ಟು ಬಿಡಿ' ಎಂದು ಕೋರಿದರು.
- ವಾದ-ಪ್ರತಿವಾದಗಳನ್ನು ಆಲಿಸಿದ ಪೀಠ ವಿಚಾರಣೆಯನ್ನು ಗುರುವಾರವೂ ಮುಂದುವರಿಸುವುದಾಗಿ ಹೇಳಿತು.

## ❖ ರಾಜ್ಯದ ಮಿತಿಯನ್ನು 9 ಕೋಟಿ ಕೆ.ಜಿಯಿಂದ 5.6 ಕೋಟಿ ಕೆ.ಜಿಗೆ ಇಳಿಸಿದ ಮಂಡಳಿ: ತಂಬಾಕು ಬೆಳೆಗೆ ಮಿತಿ ನಿಗದಿ

**ಸಂದರ್ಭ: ಕೇಂದ್ರ ತಂಬಾಕು ಮಂಡಳಿಯು 2026-27ನೇ ಸಾಲಿನಲ್ಲಿ 5.6 ಕೋಟಿ ಕೆ.ಜಿ ತಂಬಾಕನ್ನಷ್ಟೇ ರಾಜ್ಯದಲ್ಲಿ ಉತ್ಪಾದಿಸಬೇಕೆಂದು ನಿಗದಿ ಪಡಿಸಿದ್ದು, 66 ಸಾವಿರ ತಂಬಾಕು ಬೆಳೆಗಾರರಲ್ಲಿ ಆತಂಕ ಸೃಷ್ಟಿಯಾಗಿದೆ. ಇಲ್ಲಿಯವರೆಗೆ ರಾಜ್ಯದಲ್ಲಿ 9.9 ಕೋಟಿ ಕೆ.ಜಿ. ತಂಬಾಕು ಉತ್ಪಾದಿಸಲು ಅವಕಾಶವಿತ್ತು.**

- ಹಳೆ ಮೈಸೂರು ಭಾಗದ ಪ್ರಮುಖ ವಾಣಿಜ್ಯ ಬೆಳೆ ವರ್ಜೀನಿಯ ತಂಬಾಕು. ಆಂಧ್ರಪ್ರದೇಶದ ಗುಂಟೂರಿನಲ್ಲಿ ತಂಬಾಕು ಖರೀದಿ ಕಂಪನಿಗಳೊಂದಿಗೆ ಇತ್ತೀಚೆಗೆ ನಡೆಸಿದ ಸಭೆಯಲ್ಲಿ ತಂಬಾಕು ಬೆಳೆ ಮೇಲೆ ಮಿತಿ ಹೇರಲು ತೀರ್ಮಾನಿಸಲಾಗಿದೆ.
- ವಿಶ್ವದಲ್ಲಿ ಅತಿ ಹೆಚ್ಚು ತಂಬಾಕು ಬೆಳೆಯುವ ಬ್ರೆಜಿಲ್, ಜಿಂಬಾಬ್ವೆ, ನೈಜೀರಿಯಾ ದೇಶಗಳಲ್ಲಿ ಬೆಳೆ ಹಾಸ್ತಿ ಆಗಿದ್ದು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಕುಸಿದಿದೆ. ರಾಜ್ಯದಲ್ಲಿಯೂ ಉತ್ಪಾದನೆ ಹೆಚ್ಚಿದರೆ, ಬೇಡಿಕೆಯು ಮತ್ತಮ್ಮ ತಗಿ ದರ ಕುಸಿಯಬಹುದು ಎಂದು ಕಂಪನಿಗಳು ನೀಡಿದ ಸಲಹೆಯನ್ನು ಮಂಡಳಿ ಗಂಭೀರವಾಗಿ ಪರಿಗಣಿಸಿದೆ.
- 'ಕಳೆದ ಸಾಲಿನಲ್ಲಿ ಹವಾಮಾನ ವೈಪರೀತ್ಯದಿಂದ ಉತ್ಪಾದನೆ ಕುಸಿದರೂ, ಉತ್ತಮ ದರ ಸಿಗದ್ದೆ ರೈತರು ಬೀದಿಗಿಳಿದು ಹೋರಾಟ ನಡೆಸಿದರು. ಈ ಸಮಸ್ಯೆ ಮರುಕಳಿಸಬಾರದು ಎಂಬ ಉದ್ದೇಶದಿಂದ ಮಿತಿ ಹೇರಲಾಗಿದೆ' ಎಂದು ತಂಬಾಕು ಮಂಡಳಿಯ ಮೈಸೂರು ಪ್ರಾದೇಶಿಕ ವ್ಯವಸ್ಥಾಪಕ ಗೋಪಾಲ್ 'ಪ್ರಜಾವಾಣಿ'ಗೆ ತಿಳಿಸಿದರು.
- ಸಿಂಗಲ್ ಬ್ಯಾರನ್‌ಗೆ 0.85 ಹೆಕ್ಟೇರ್' 'ಮುಂಬರುವ ಸಾಲಿನಲ್ಲಿ ಸಿಂಗಲ್ ಬ್ಯಾರನ್‌ಗೆ 0.85 ಹೆಕ್ಟೇರ್ ಪ್ರದೇಶದಲ್ಲಿ ಗರಿಷ್ಠ 1,017 ಕೆ.ಜಿಯಷ್ಟೇ ತಂಬಾಕು ಉತ್ಪಾದಿಸಬೇಕೆಂದು ನಿಗದಿಗೊಳಿಸಲಾಗಿದೆ ಇಷ್ಟು ವರ್ಷ 2.5 ಹೆಕ್ಟೇರ್ ಪ್ರದೇಶದಲ್ಲಿ ತಂಬಾಕು ಬೆಳೆಯಲು ಅವಕಾಶವಿತ್ತು ಅನಧಿಕೃತವಾಗಿ ಬೆಳೆಯುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ ಇದು ನೆರೆಯ ಆಂಧ್ರಪ್ರದೇಶಕ್ಕೂ ಅನ್ವಯಿಸುವಂತೆ ಮಂಡಳಿ ಕ್ರಮ ವಹಿಸಬೇಕು. ಇಲ್ಲದಿದ್ದರೆ. ರಾಜ್ಯದ ಬೆಳೆಗಾರರ ಪರವಾನಗಿಯನ್ನು ಹಿಂಪಡೆದು ವೈಜ್ಞಾನಿಕವಾಗಿ ಪರಿಹಾರ ನೀಡಬೇಕು. ಆಗ ಪರ್ಯಾಯ ಬೆಳೆ ಬೆಳೆಯುತ್ತೇವೆ' ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಹೊಸೂರು ಕುಮಾರ್ ಹೇಳಿದರು.

## ❖ ಎಪಿವೈ: 9 ಕೋಟಿ ದಾಟಿದ ಚಂದಾದಾರರ ಸಂಖ್ಯೆ

**ಸಂದರ್ಭ: ಕೇಂದ್ರ ಸರ್ಕಾರ ರೂಪಿಸಿದ ಪಿಂಚಣಿ ಯೋಜನೆಗಳಲ್ಲಿ ಒಂದಾಗಿರುವ 'ಅಟಲ್ ಪಿಂಚಣಿ ಯೋಜನೆ'ಯು ಈಗ ಒಂಬತ್ತು ಕೋಟಿ ಚಂದಾದಾರರನ್ನು ಹೊಂದಿದೆ.**

- 2025-26ನೆಯ ಹಣಕಾಸು ವರ್ಷದಲ್ಲಿ ಈ ಯೋಜನೆಗೆ ಚಂದಾದಾರ ಆದವರ ಒಟ್ಟು ಸಂಖ್ಯೆಯು 1.35 ಕೋಟಿಯನ್ನು ದಾಟಿದೆ. ಈ ಯೋಜನೆಯು ಜಾರಿಗೆ ಬಂದ ನಂತರದಲ್ಲಿ ಒಂದು ವರ್ಷದ ಅವಧಿಯಲ್ಲಿ ಆಗಿರುವ ಅತಿಹೆಚ್ಚಿನ ಸಂಖ್ಯೆಯ ನೋಂದಣಿ ಇದಾಗಿದೆ.
- ಬಡವರು, ದುರ್ಬಲರು, ಅಸಂಘಟಿತ ವಲಯದ ಕಾರ್ಮಿಕರನ್ನು ಗುರಿಯಾಗಿಸಿಕೊಂಡ ಯೋಜನೆ ಇದು 2015ರಲ್ಲಿ ಇದನ್ನು ಜಾರಿಗೆ ತರಲಾಯಿತು.
- ಚಂದಾದಾರರಿಗೆ 60 ವರ್ಷ ವಯಸ್ಸು ಆದಾಗ ಈ ಯೋಜನೆಯ ಅಡಿ ಕನಿಷ್ಠ ₹1,000ದಿಂದ ₹5,000ವರೆಗೆ ನಿಶ್ಚಿತ ಪಿಂಚಣಿ ಲಭ್ಯವಾಗುತ್ತದೆ. 18 ವರ್ಷದಿಂದ 40 ವರ್ಷ ವಯಸ್ಸಿನವರೆಗಿನ ಎಲ್ಲ ಭಾರತೀಯರಿಗೆ ಈ ಯೋಜನೆ ಮುಕ್ತವಾಗಿದೆ. ಆದರೆ ಆದಾಯ ತೆರಿಗೆ ಪಾವತಿದಾರರಿಗೆ ಹಿಂದೆ ಆದಾಯ ತೆರಿಗೆ ಪಾವತಿ ಮಾಡಿದವರಿಗೆ ಯೋಜನೆ ಸೇರಲು ಅವಕಾಶವಿಲ್ಲ.

## ❖ ವಿತ್ತೀಯ ಕೊರತೆ ಹೆಚ್ಚಳ ಸಾಧ್ಯತೆ

**ಸಂದರ್ಭ: ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕೆಟ್ಟ ಪರಿಣಾಮ ಕಡಿಮೆ ಮಾಡಲು ಕೇಂದ್ರ ಸರ್ಕಾರ ತೆಗೆದುಕೊಂಡ ಕೆಲವು ಕ್ರಮಗಳ ಪರಿಣಾಮವಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ವಿತ್ತೀಯ ಕೊರತೆಯು ಅಲ್ಪ ಹೆಚ್ಚಳ ಕಾಣಬಹುದು ಎಂದು ಸಂಶೋಧನಾ ಸಂಸ್ಥೆ ಬಿಎಂಐ ಹೇಳಿದೆ.**

- ವಿತ್ತೀಯ ಕೊರತೆ ಪ್ರಮಾಣವು ದೇಶದ ಜಿಡಿಪಿಯ ಶೇ 4.3ರಷ್ಟು ಆಗಬಹುದು ಎಂದು ಈ ಬಾರಿಯ ಬಜೆಟ್ ನಲ್ಲಿ ಅಂದಾಜು ಮಾಡಲಾಗಿದೆ. ಆದರೆ ಅದು ಆ ಅಂದಾಜನ್ನು ಮೀರಿ ಶೇ4.5ರಷ್ಟು ಆಗಬಹುದು ಎಂದು ಬಿಎಂಐ ಹೇಳಿದೆ.
- ಬಹಳ ವಿರಳವಾದ ಸಂಪನ್ಮೂಲಗಳಾದ ಹಾಗೂ ಸೆಮಿಕಂಡಕ್ಟರ್ ಚಿಪ್‌ಗಳ ಉತ್ಪಾದನೆಯಲ್ಲಿ ಬಳಕೆ ಮಾಡುವ ಹೀಲಿಯಂ ಮತ್ತು ಗಂಧಕದ ರಫ್ತಿನ ಮೇಲೆ ಕೇಂದ್ರ ಸರ್ಕಾರವು ನಿರ್ಬಂಧ ವಿಧಿಸುವ ಸಾಧ್ಯತೆ ಇದೆ ಎಂದು ಅದು ಹೇಳಿದೆ.
- ಗಂಧಕವನ್ನು ರಸಗೊಬ್ಬರಗಳ ತಯಾರಿಕೆಯಲ್ಲಿ ಕೂಡ ಬಳಕೆ ಮಾಡಲಾಗುತ್ತದೆ. ಕೃಷಿ ವಲಯದಲ್ಲಿ ಯಾವುದೇ ಅಡ್ಡಿಗಳು ಸೃಷ್ಟಿಯಾಗದಂತೆ ನೋಡಿಕೊಳ್ಳಲು ಕೇಂದ್ರವು ಶ್ರಮಿಸಲಿದೆ ಎಂದಿದೆ.

## ❖ ಎಟಿಎಫ್‌ನಲ್ಲಿ ಎಥೆನಾಲ್ ಮಿಶ್ರಣಕ್ಕೆ ಅನುಮತಿ

**ಸಂದರ್ಭ: ವಿಮಾನ ಇಂಧನದಲ್ಲಿ (ಎಟಿಎಫ್) ಎಥೆನಾಲ್ ಮಿಶ್ರಣಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಆದರೆ ಕಡ್ಡಾಯವಾಗಿ ಇಂತಿಷ್ಟೇ ಪ್ರಮಾಣದಲ್ಲಿ ಅದರ ಮಿಶ್ರಣ ಇರಬೇಕು ಎಂಬ ಗುರಿ ನಿಗದಿ ಮಾಡಿಲ್ಲ.**

- ವಿಮಾನ ಇಂಧನ (ಮಾರುಕಟ್ಟೆ ನಿಯಂತ್ರಣ) ಆದೇಶ 2001ಕ್ಕೆ ತಿದ್ದುಪಡಿ ತಂದ ನಂತರದಲ್ಲಿ ಈ ಹೆಜ್ಜೆ ಇರಿಸಲಾಗಿದೆ. ಇಂಗಾಲದ ಹೊರಸೂಸುವಿಕೆಯನ್ನು ತಗ್ಗಿಸಿ, ತೈಲದ ಆಮದು ಕಡಿಮೆ ಮಾಡುವ ಉದ್ದೇಶದಿಂದ ಹೀಗೆ ಮಾಡಲಾಗಿದೆ.

## ❖ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಹುದ್ದೆಯ ಅಭ್ಯರ್ಥಿಗೆ ಭಾರತ ಪ್ರಶ್ನೆ: 'ಜಾಗತಿಕ ದಕ್ಷಿಣಕ್ಕೆ ಹೇಗೆ ನೆರವಾಗುವಿರಿ?'

**ಸಂದರ್ಭ: ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರೆ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ವಿಸ್ತರಣೆ ಮತ್ತು ಜಗತ್ತಿನ ದಕ್ಷಿಣ ಭಾಗದ ಅಭಿವೃದ್ಧಿಯ ಗುರಿಗಳನ್ನು ಹೇಗೆ ಈಡೇರಿಸುವಿರಿ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯ ಅಭ್ಯರ್ಥಿ ಹಾಗೂ ಚಿಲಿಯ ಮಾಜಿ ಅಧ್ಯಕ್ಷ ಮಿಚೆಲ್ ಬ್ಯಾಚೆಲೆಟ್ ಅವರನ್ನು ಭಾರತ ಪ್ರಶ್ನಿಸಿದೆ.**

- ಭಾರತದ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ (ಪಶ್ಚಿಮ) ರಾಯಭಾರಿ ಸಿಬಿ ಜಾರ್ಜ್ ಅವರು ಬ್ಯಾಚೆಲೆಟ್ ಅವರೊಂದಿಗೆ ಎರಡು ವಿಷಯಗಳನ್ನು ಎತ್ತಿ ಅವರ ದೃಷ್ಟಿಕೋನವೇನು ಎಂದು ಪ್ರಶ್ನಿಸಿದ್ದಾರೆ.
- ಇಲ್ಲಿ ಮೂರು ಗಂಟೆ ನಡೆದ ಸಂವಾದದ ವೇಳೆ, ಬ್ಯಾಚೆಲೆಟ್ ಅವರು ಮುಂದಿನ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ತಾನು ಯಾಕೆ ಉತ್ತಮ ಆಯ್ಕೆ ಮತ್ತು ತಮ್ಮ ದೃಷ್ಟಿಕೋನ ಏನು ಎಂಬುದರ ಕುರಿತ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಮತ್ತು ನಾಗರಿಕ ಸಂಘಟನೆಗಳ ಪ್ರಶ್ನೆಗಳಿಗೆ ಉತ್ತರಿಸಿದರು.
- ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಾಜಿ ಹೈ ಕಮಿಷನರ್ ಆಗಿರುವ ಬ್ಯಾಚೆಲೆಟ್ ಅವರು, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯ ಸ್ಪರ್ಧೆಯಲ್ಲಿರುವ ನಾಲ್ಕರಲ್ಲಿ ಒಬ್ಬರು.
- ಪ್ರಸ್ತುತ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಗಿರುವ ಆಂಟೋನಿಯೊ ಗುಟೆರಸ್ ಅಧಿಕಾರಾವಧಿ ಡಿಸೆಂಬರ್ 31ರಂದು ಪೂರ್ಣಗೊಳ್ಳಲಿದೆ. ಅವರು ಸತತ ಎರಡು ಬಾರಿ ಐದು ವರ್ಷಗಳ ಕಾಲ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.

### 'ಎಲ್ಲರ ಧ್ವನಿ ಕೇಳುವಂತೆ ಮಾಡುತ್ತೇನೆ'



ಮಿಚೆಲ್ ಬ್ಯಾಚೆಲೆಟ್

ಪ್ರಧಾನ ಕಾರ್ಯದರ್ಶಿ ಹುದ್ದೆಗೆ ತಾನು ಆಯ್ಕೆಯಾಗದರೆ ಜಗತ್ತಿನ ದಕ್ಷಿಣ ಭಾಗದ ದೇಶಗಳ ಅಗತ್ಯಗಳಿಗೆ ಆದ್ಯತೆ ನೀಡುವುದು ಮತ್ತು ಸದಸ್ಯ ರಾಷ್ಟ್ರಗಳಿಗೆ ಸೇವೆ ಸಲ್ಲಿಸುವ ಸಾಮರ್ಥ್ಯವನ್ನು ಬಲಪಡಿಸುವ ಸುಧಾರಣೆಗಳನ್ನು ಕೈಗೊಳ್ಳುವುದು ತನ್ನ ಅಧಿಕಾರಾವಧಿಯ ಪ್ರಮುಖ ಭಾಗವಾಗಿರುತ್ತದೆ ಎಂದು ಬ್ಯಾಚೆಲೆಟ್ ತಿಳಿಸಿದ್ದಾರೆ.

ವಿಶ್ವಸಂಸ್ಥೆ ಮತ್ತು ಸಚಿವಾಲಯದಲ್ಲಿ ವಿವಿಧ ನಿರ್ಧಾರ ತೆಗೆದುಕೊಳ್ಳುವ ಸ್ಥಾನಗಳಲ್ಲಿ ಅಭಿವೃದ್ಧಿಶೀಲ ಸಣ್ಣ ದ್ವೀಪ ರಾಷ್ಟ್ರಗಳು (ಎಸ್‌ಐಡಿಎಸ್), ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು (ಎಲ್‌ಡಿಸಿಸ್) ಮತ್ತು ಸುತ್ತಲೂ ಭೂಮಿಯಿಂದ ಆವೃತ್ತವಾಗಿರುವ ಸಮುದ್ರ ಮಾರ್ಗವಿಲ್ಲದ ಅಭಿವೃದ್ಧಿಶೀಲ ರಾಷ್ಟ್ರಗಳು (ಎಲ್‌ಎಲ್‌ಡಿಸಿಸ್) ಉತ್ತಮ ಪ್ರಾತಿನಿಧ್ಯ ಹೊಂದುವುದನ್ನು ನಾನು ಖಚಿತಪಡಿಸಿಕೊಳ್ಳುತ್ತೇನೆ. ಇದರಿಂದ ಎಲ್ಲರ ಧ್ವನಿಗಳೂ ಕೇಳುವಂತೆ ಆಗುತ್ತದೆ ಎಂದು ಬ್ಯಾಚೆಲೆಟ್ ಹೇಳಿದ್ದಾರೆ.

## ❖ ಹಾಲನಾಯಕನಹಳ್ಳಿ ಗ್ರಾ.ಪಂಗೆ ಕೇಂದ್ರ ಸರ್ಕಾರದ ಪುರಸ್ಕಾರ

**ಸಂದರ್ಭ: ಮಕ್ಕಳ ಸ್ನೇಹಿ ಪಂಚಾಯಿತಿ ವಿಭಾಗದಲ್ಲಿ ನಾಮನಿರ್ದೇಶನ. ಪ್ರೋತ್ಸಾಹ ಧನವಾಗಿ ₹75 ಲಕ್ಷ ವಿತರಣೆ.**

- ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಸಚಿವಾಲಯ ಪ್ರಕಟಿಸುವ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್‌ರಾಜ್ ಅಭಿವೃದ್ಧಿ ಪುರಸ್ಕಾರಕ್ಕೆ ಪೂರ್ವ ತಾಲ್ಲೂಕಿನ ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ಪಾತ್ರವಾಗಿದೆ ಅಭಿವೃದ್ಧಿಗೆ ಪ್ರೋತ್ಸಾಹ ಧನವಾಗಿ ₹75 ಲಕ್ಷ ನೀಡಲಾಗಿದೆ.
- ಗ್ರಾಮ ಪಂಚಾಯಿತಿ ವ್ಯಾಪ್ತಿಯಪ್ರತಿ ಹಳ್ಳಿಯ ಮಗುವಿನ ಆರೋಗ್ಯ, ಶಿಕ್ಷಣ, ಸುರಕ್ಷತೆ ಮತ್ತು ಸಮಗ್ರ ಅಭಿವೃದ್ಧಿಯನ್ನು ಕೈಗೊಂಡು ಮಕ್ಕಳಕಲ್ಯಾಣಕ್ಕೆ ಒತ್ತು ನೀಡುತ್ತಿರುವ ಕಾರಣಕ್ಕೆ ಮಕ್ಕಳ ಸ್ನೇಹಿ ಪಂಚಾಯಿತಿ ವಿಭಾಗದಲ್ಲಿ ನಾಮನಿರ್ದೇಶನ ಗೊಂಡಿದೆ.
- ಎಲ್ಲ ಅಂಗನವಾಡಿ ಕೇಂದ್ರಗಳಲ್ಲಿ ಡಿಜಿಟಲ್ ಪರಿವರ್ತನೆ ಮತ್ತು ಸ್ಮಾರ್ಟ್ ಮೂಲಸೌಕರ್ಯ ಒದಗಿಸುವ ಮೂಲಕ ಡಿಜಿಟಲೀಕರಣಗೊಳಿಸಲಾಗಿದೆ. ಮಕ್ಕಳಿಗೆ 360 ಡಿಗ್ರಿ ಅಭಿವೃದ್ಧಿಯ ಮಾದರಿಯನ್ನು ಸಾಂಸ್ಥಿಕಗೊಳಿಸಿ ಮಕ್ಕಳ ಸಮಗ್ರ ಬೆಳವಣಿಗೆಗೆ ಕಾರಣ ವಾಗಿದೆ.
- ಗ್ರಾಮ ಪಂಚಾಯತಿ ವ್ಯಾಪ್ತಿಯ ಶಾಲೆ ಹಾಗೂ ಅಂಗನವಾಡಿಯಲ್ಲಿ ಕಂಪ್ಯೂಟರ್ ಪ್ರಯೋಗಾಲಯ, ಸಿ.ಸಿ.ಟಿ.ವಿ ಕ್ಯಾಮೆರಾ ಕಣಾವಲು ಮತ್ತು ಅಧುನಿಕ ಕಲಿಕೆ, ರಂಗಮಂದಿರ, ಉಪಾಹಾರ ಕೊಠಡಿ, ಹೊಸ ತರಗತಿ ಕೊಠಡಿ ಹಾಗೂ ಆಟದ ಮೈದಾನಗಳ ವ್ಯವಸ್ಥೆ ಮಾಡಲಾಗಿದೆ ಮಕ್ಕಳಿಗೆ ' ಸಮವಸ್ತ್ರ, ಕಲಿಕಾ ಸಾಮಾಗ್ರಿ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ಅನ್ನು ನೀಡಲಾಗಿದೆ.

## ❖ ಎಚ್.ಡಿ.ದೇವೇಗೌಡಗೆ 'ಬಸವಶ್ರೀ' ಗುರುರಾಜಗೆ 'ವಚನ ಸಾಹಿತ್ಯಶ್ರೀ' ಪ್ರಶಸ್ತಿ

**ಸಂದರ್ಭ: ಬಸವ ವೇದಿಕೆ ವತಿಯಿಂದ ನೀಡುವ 2026ನೇ ಸಾಲಿನ 'ಬಸವಶ್ರೀ ಪ್ರಶಸ್ತಿ'ಗೆ ಜೆಡಿಎಸ್ ವರಿಷ್ಠರೂ ಆಗಿರುವ ರಾಜ್ಯಸಭೆ ಸದಸ್ಯ ಎಚ್.ಡಿ. ದೇವೇಗೌಡ, 'ವಚನ ಸಾಹಿತ್ಯಶ್ರೀ ಪ್ರಶಸ್ತಿ'ಗೆ ಶಿಕ್ಷಣ ತಜ್ಞ ಗುರುರಾಜ ಕರಜಗಿ ಅವರನ್ನು ಆಯ್ಕೆ ಮಾಡಲಾಗಿದೆ.**

- ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಸವ ವೇದಿಕೆಯ ಅಧ್ಯಕ್ಷ ಸಿ. ಸೋಮಶೇಖರ್ 'ಬಸವಶ್ರೀ ಪ್ರಶಸ್ತಿಯು ಬಸವಣ್ಣನ ಪುತ್ಥಳಿ, ಸ್ಮರಣಿಕ ಒಳಗೊಂಡಿದೆ. ವಚನ ಸಾಹಿತ್ಯಶ್ರೀ ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ' ಎಂದು ತಿಳಿಸಿದರು.

## ❖ ಆನ್‌ಲೈನ್ ಆಟಗಳಿಗೆ ನಿಯಮ

**ಸಂದರ್ಭ: 'ಆನ್‌ಲೈನ್ ಆಟಗಳ ಉತ್ತೇಜನ ಮತ್ತು ನಿಯಂತ್ರಣ ಕಾಯ್ದೆ'ಯ ಅನುಷ್ಠಾನಕ್ಕೆ ಅಗತ್ಯವಿರುವ ನಿಯಮಗಳನ್ನು ಕೇಂದ್ರ ಸರ್ಕಾರವು ಅಧಿಸೂಚನೆಯಲ್ಲಿ ಪ್ರಕಟಿಸಿದೆ. ಆನ್‌ಲೈನ್ ಆಟಗಳಿಗೆ ಸಂಬಂಧಿಸಿದ ಪ್ರಾಧಿಕಾರವೊಂದರ ರಚನೆಗೆ ಅವಕಾಶ ಕಲ್ಪಿಸಿದೆ. ನಿಯಮಗಳು ಮೇ 1ರಿಂದ ಜಾರಿಗೆ ಬರಲಿವೆ.**

- ಹೊಸ ನಿಯಮಗಳ ಪ್ರಕಾರ, ಆಟವೊಂದು ಹಣ ತೊಡಗಿಸಬೇಕಾದ ವರ್ಗಕ್ಕೆ ಸೇರಿದೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಹಣ ತೊಡಗಿಸಬೇಕಾದ ಆಟಗಳಿಗೆ ಕಾಯ್ದೆಯು ನಿಷೇಧ ಹೇರಿದೆ.
- 'ಇಡೀ ವ್ಯವಸ್ಥೆಯು ಕಡಿಮೆ ಪ್ರಮಾಣದಲ್ಲಿ ನಿಯಂತ್ರಣವನ್ನು ಹೇರುತ್ತದೆ ಹಣವನ್ನು ತೊಡಗಿಸದೆಯೇ ಆಡಬಹುದಾದ ಬಹುತೇಕ ಆಟಗಳು ನೋಂದಣಿ ಮಾಡಿಸುವ ಅಗತ್ಯ ಇಲ್ಲದೆಯೇ ಕಾರ್ಯಾಚರಿಸಲು ಅವಕಾಶ ಇದೆ' ಎಂದು ಮಾಹಿತಿ ತಂತ್ರಜ್ಞಾನ ಕಾರ್ಯದರ್ಶಿ ಎಸ್. ಕೃಷ್ಣನ್ ಅವರು ಹೇಳಿದ್ದಾರ
- ಮಕ್ಕಳು ಸೇರಿದಂತೆ ಆಟ ಆಡುವವರಿಗೆ ಅಪಾಯ ಇದ್ದಲ್ಲಿ. ಆಟದಲ್ಲಿ ಭಾಗವಹಿಸುತ್ತಿರುವ ಜನರ ಪ್ರಮಾಣವನ್ನು ಗಮನಿಸಿ. ಆಟದಲ್ಲಿನ ಹಣದ ವಹಿವಾಟು ಗಮನಿಸಿ, ಆಟವು ಯಾವ ದೇಶದ್ದು ಎಂಬುದನ್ನು ಗಮನಿಸಿ ಸರ್ಕಾರವು ಆಟವನ್ನು ನೋಂದಣಿ ಮಾಡುವಂತೆ ಸೂಚಿಸಬಹುದು. ಇ-ಸ್ಪೋರ್ಟ್ ಚಟುವಟಿಕೆಗಳನ್ನು ನೋಂದಣಿ ಮಾಡಿಸುವುದು ಕಡ್ಡಾಯ.

- ಆನ್‌ಲೈನ್ ಆಟವೊಂದು ಹಣವನ್ನು ತೊಡಗಿಸುವ ಅಗತ್ಯ ಸೃಷ್ಟಿಸುವ ಆಟವೇ ಅಥವಾ ಅದು ಕಾನೂನಿನ ಅಡಿ ಅನುಮತಿ ಹೊಂದಿರುವ ಆನ್‌ಲೈನ್ ಸಾಮಾಜಿಕ ಆಟವೇ ಎಂಬುದನ್ನು ಸಮಯಮಿತಿಯಲ್ಲಿ ಹಾಗೂ ಪಾರದರ್ಶಕವಾಗಿ ತೀರ್ಮಾನಿಸಲು ಹೊಸ ನಿಯಮಗಳು ಸ್ಪಷ್ಟವಾದ ಚೌಕಟ್ಟನ್ನು ಕಲ್ಪಿಸುತ್ತವೆ.

## ❖ ಎಥೆನಾಲ್: ಇಂಧನ ಸ್ವಾವಲಂಬನೆಗೆ ಪೂರಕ

**ಸಂದರ್ಭ: ಎಥನಾಲ್ ಬಳಕೆ-ಉತ್ಪಾದನೆ ಹೆಚ್ಚಿಸುವುದು ಸದ್ಯದ ಅಗತ್ಯ ಮಾತ್ರವಲ್ಲ, ಭವಿಷ್ಯತ್ತಿನ ಬೇಡಿಕೆಯೂ ಹೌದು. ಪರಿಸರ ಹಾಗೂ ಆರ್ಥಿಕತೆಗೂ ಎಥೆನಾಲ್ ಬಳಕೆ ಪೂರಕ.**

- 'ವಾಹನಗಳಲ್ಲಿ ಶೇ 100ರಷ್ಟು ಎಥೆನಾಲ್ ಬಳಕೆಯ ಗುರಿಯನ್ನು ಭಾರತ ಹೊಂದಬೇಕು' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಹೇಳಿರುವುದು, ಪರ್ಯಾಯ ಇಂಧನ ಬಳಕೆಯ ಬಗ್ಗೆ ಯೋಚಿಸಲು ಪ್ರೇರಣೆ ನೀಡುವಂತಿದೆ ಪಶ್ಚಿಮ ಏಷ್ಯಾದಲ್ಲಿನ ಯುದ್ಧ.
- ಇಂಧನ ವಲಯದಲ್ಲಿ ಭಾರತವು ಪರಾವಲಂಬಿ ಆಗಿರುವುದರ ಅಪಾಯವನ್ನು ಸ್ಪಷ್ಟವಾಗಿ ಕಾಣಿಸಿದೆ. ಇಂಧನ ಸ್ವಾವಲಂಬನೆಗೆ ಪೆಟ್ರೋಲಿಯಂನಿಂದ ಬೇರೆಡೆಗೆ ಹೊರಳಿಕೊಳ್ಳುವುದು ಅನಿವಾರ್ಯ ಈ ಹುಡುಕಾಟದಲ್ಲಿ ಎಥನಾಲ್ ಬೆಳ್ಳಿಚುಕ್ಕಿಯಂತೆ ಕಾಣಿಸುತ್ತದೆ.
- ಎಥನಾಲ್ ಬಳಕೆಗೆ ಹಲವು ಆಯಾಮಗಳಿವೆ. ವಿದೇಶಿ ವಿನಿಮಯ ಉಳಿತಾಯ, ದೇಶದ ಆರ್ಥಿಕ ಪ್ರಗತಿ, ಇಂಧನ ಸ್ವಾವಲಂಬನೆ, ಆಟೋಮೊಬೈಲ್ ಕ್ಷೇತ್ರದಲ್ಲಿ ಸುಧಾರಣೆ, ರೈತರ ಹಿತರಕ್ಷಣೆ, ಪರಿಸರ ಮಾಲಿನ್ಯ ನಿಯಂತ್ರಣ, ಸಕ್ಕರೆ ಉದ್ಯಮದ ಉಳಿವು ಸೇರಿದಂತೆ ಹಲವು ಸಾಧ್ಯತೆಗಳಿಗೂ ಎಥೆನಾಲ್ ಬಳಕೆ ವ್ಯಾಪಕವಾಗುವುದಕ್ಕೂ ಸಂಬಂಧವಿದೆ. ಹಾಗಾಗಿ, ಗಡ್ಕರಿ ಅವರ ಮಾತನ್ನು ಸದ್ಯದ ಸಂಘರ್ಷ ಸಂದರ್ಭದಲ್ಲಿನ ಮಾತಿನ ರೂಪದಲ್ಲಷ್ಟೇ ನೋಡದೆ, ದೇಶದ ಭವಿಷ್ಯದ ರೂಪದಲ್ಲಿ ನೋಡಬೇಕಾಗಿದೆ.
- ಭಾರತದಲ್ಲಿ ಅಂದಾಜು 60 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 500 ದಶಲಕ್ಷ ಟನ್ ಕಬ್ಬು ಬೆಳೆಯಲಾಗುತ್ತಿದೆ ಇದರಿಂದ 360 ಲಕ್ಷ ಟನ್ ಸಕ್ಕರೆ ಅಥವಾ 24 ಸಾವಿರ ಕೋಟಿ ಲೀಟರ್ ಎಥೆನಾಲ್ ಉತ್ಪಾದಿಸಬಹುದಾಗಿದೆ. ಆದರೆ, ಲಭ್ಯವಿರುವ ಕಬ್ಬನ್ನೆಲ್ಲ, ಬಳಸಿಕೊಂಡು 360 ಲಕ್ಷ ಟನ್ ಸಕ್ಕರೆ ಉತ್ಪಾದಿಸಿದರೆ, ಬೇಡಿಕೆಗಿಂತಲೂ ಉತ್ಪಾದನೆ ಹೆಚ್ಚಾಗಿ, ಸಕ್ಕರೆ ದರವು ಕುಸಿಯುತ್ತದೆ; ಕಬ್ಬು ಬೆಳೆಗಾರರಿಗೆ ದರ ಪಾವತಿಸಲು ವಿಳಂಬವಾಗುವ ಅಪಾಯವಿರುತ್ತದೆ. ಹಾಗೆಯೇ ಎಲ್ಲ ಕಬ್ಬನ್ನೂ ಎಥೆನಾಲ್ ಉತ್ಪಾದನೆಗೆ ಬಳಸುವುದೂ ಸಾಧ್ಯವಿಲ್ಲ ಅಷ್ಟು ದೊಡ್ಡ ಪ್ರಮಾಣದಲ್ಲಿ ಎಥೆನಾಲ್ ಉತ್ಪಾದಿಸಲು ಹಾಗೂ ಬಳಸಲು ನಮ್ಮ ದೇಶದಲ್ಲಿ ಸೂಕ್ತ ವ್ಯವಸ್ಥೆಗಳಿಲ್ಲ.
- ವಿಶ್ವದಲ್ಲೇ ಭಾರತ ಅತಿ ಹೆಚ್ಚು ಸಕ್ಕರೆ ಬಳಸುವ ದೇಶ. ಇಲ್ಲಿ ವಾರ್ಷಿಕ 260 ಲಕ್ಷ ಟನ್ ಸಕ್ಕರೆ ಬಳಸಲಾಗುತ್ತಿದೆ ಹಾಗಾಗಿ, ಅಗತ್ಯವಿರುವಷ್ಟು ಸಕ್ಕರೆಯನ್ನು ಮಾತ್ರ ಉತ್ಪಾದಿಸಿ, ಉಳಿದ ಕಬ್ಬಿನಲ್ಲಿ 7,000 ಕೋಟಿ ಲೀಟನರ್‌ನನ್ನು ಎಥನಾಲ್ ಉತ್ಪಾದಿಸಬಹುದು. ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ 330 ಲಕ್ಷ ಟನ್ ಸಕ್ಕರೆ ಮತ್ತು 2,000 ಕೋಟಿ ಲೀಟರ್‌ನಷ್ಟು ಎಥೆನಾಲ್ ಉತ್ಪಾದನೆಯನ್ನು ನಿರೀಕ್ಷಿಸಲಾಗುತ್ತಿದೆ. ಈ ಸಮೀಕರಣ ಬದಲಾಗಬೇಕಿದೆ.
- ಪ್ರಸ್ತುತ ಭಾರತದಲ್ಲಿ 380 ಡಿಸ್ಟಿಲರಿ ಘಟಕಗಳಿಂದ 2,000 ಕೋಟಿ ಲೀಟರ್‌ನಷ್ಟು ಎಥೆನಾಲ್ ಉತ್ಪಾದಿಸಿ, ಶೇ 20ರವರೆಗೆ ಪೆಟ್ರೋಲ್‌ನಲ್ಲಿ ಮಿಶ್ರಣಗೊಳಿಸಲಾಗುತ್ತಿದೆ ಇದರಿಂದ ಪ್ರಸಕ್ತವರ್ಷದಲ್ಲಿ ಸರ್ಕಾರಕ್ಕೆ ₹1.5 ಲಕ್ಷ ಕೋಟಿ ವಿದೇಶಿ ವಿನಿಮಯ ಉಳಿತಾಯವಾಗುತ್ತದೆ ಎನ್ನುವ ಲೆಕ್ಕಾಚಾರವಿದೆ ದೇಶವನ್ನು ಆರ್ಥಿಕವಾಗಿ ಮತ್ತಷ್ಟು ಪ್ರಬಲಗೊಳಿಸಲು ಹೆಚ್ಚಿನ ಪ್ರಮಾಣದಲ್ಲಿ ಎಥೆನಾಲ್ ಉತ್ಪಾದಿಸಿ ವಿದೇಶಿ ವಿನಿಮಯ ಹೆಚ್ಚಿಸಿಕೊಳ್ಳುವತ್ತ ಸರ್ಕಾರ ಚಿಂತಿಸಬೇಕಾಗಿದೆ ಸದ್ಯದ ಬಿಕ್ಕಟ್ಟುಗಳು ಭವಿಷ್ಯದಲ್ಲಿಯೂ ಮುಂದುವರಿಯುವ ಸಾಧ್ಯತೆಗಳಿವೆ ಹಾಗೂಶೈಲಬಾವಿಗಳ ನಿಕ್ಷೇಪ ಒಂದಲ್ಲಾ ಒಂದುದಿನ ಮುಗಿದುಹೋಗುವ ಸಂಪನ್ಮೂಲಆಗಿದೆ ಹಾಗಾಗಿ, ಕಡಿಮೆ ಖರ್ಚಿನ ಹಾಗೂ ಪರಿಸರಸ್ನೇಹಿ ಇಂಧನವಾಗಿರುವ ಎಥೆನಾಲ್ ಉತ್ಪಾದನೆಗೆ ಭಾರತದಲ್ಲಿ ಮುಕ್ತ ಅವಕಾಶ ದೊರೆಯಬೇಕು ಪ್ರಸಕ್ತ

Dr. Rajkumar KAS Academy

ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಸಮಯವು ಎಥೆನಾಲ್ ವಿಷಯದಲ್ಲಿ ಐತಿಹಾಸಿಕ ನಿರ್ಣಯ ಕೈಗೊಳ್ಳಲು ಸಕಾಲವಾಗಿದೆ.

- ಬ್ರೆಜಿಲ್ ಮತ್ತು ಅಮೆರಿಕಗಳಂತೆ ಭಾರತದಲ್ಲಿಯೂ ಎಥನಾಲ್ ಮಿಶ್ರಣ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬೇಕು ಮತ್ತು ಡೀಸೆಲ್‌ನಲ್ಲಿಯೂ ಎಥೆನಾಲ್ ಸೇರಿಸಬೇಕು. ಈಗಾಗಲೇ ಭಾರತದಲ್ಲಿ ಎಥನಾಲ್‌ಗೆ ಸರಿಹೊಂದುವ ವಾಹನಗಳನ್ನು ತಯಾರಿಸಲಾಗುತ್ತಿದೆ ಎಥೆನಾಲ್ ಬಳಕೆಯ ವಿಷಯದಲ್ಲಿದ್ದ ಗೊಂದಲಗಳಿಗೆ ಸುಪ್ರೀಂ ಕೋರ್ಟ್ ಪೂರಕವಾದ ತೀರ್ಪು ನೀಡಿದೆ ಹಾಗಾಗಿ ಎಥೆನಾಲ್ ಆಧಾರಿತ ಒಲೆಗಳನ್ನು ಅಭಿವೃದ್ಧಿಪಡಿಸಿ, ನಮ್ಮ ಅಡುಗೆಮನೆಗಳಿಗೆ ಹೊಸ ಸಾಧ್ಯತೆ ಪರಿಚಯಿಸಬಹುದಾಗಿದೆ. ಈ ನಿಟ್ಟಿನಲ್ಲಿ ಎಥನಾಲ್ ಘಟಕಗಳಿಗೆ ಸಹಕಾರ ಮತ್ತು ಸಹಾಯಧನವನ್ನು ಸರ್ಕಾರ ಕಲ್ಪಿಸಬೇಕು.
- ಶೇ 20ರಷ್ಟು ಎಥೆನಾಲ್ ಮಿಶ್ರಣ ಇರುವ ಪೆಟ್ರೋಲ್ ಬಳಕೆಗೆ 2023ರ ಏಪ್ರಿಲ್‌ನಿಂದ ಅವಕಾಶ ದೊರೆತಿದೆ. ಬ್ರೆಜಿಲ್‌ನಲ್ಲಿ ಪೂರ್ಣ ಪ್ರಮಾಣದಲ್ಲಿ ಎಥೆನಾಲ್ ಇಂಧನದಿಂದಲೇ ಸಂಚರಿಸುವ ವಾಹನಗಳನ್ನು ಬಳಸಲಾಗುತ್ತಿದೆ, ಅದು ನಮ್ಮಲ್ಲೂ ಸಾಧ್ಯವಾಗಬೇಕು ಪ್ರಸ್ತುತ ಭಾರತದಲ್ಲಿನ ವಾಹನಗಳಿಗೆ ವಾರ್ಷಿಕವಾಗಿ 50 ಬಿಲಿಯನ್ ಲೀಟರ್ ಪೆಟ್ರೋಲ್ ಅವಶ್ಯಕತೆಯಿದೆ. ಇದರಲ್ಲಿ 10 ಬಿಲಿಯನ್ ಲೀಟರ್‌ನಷ್ಟು ಎಥೆನಾಲ್ ಮಿಶ್ರಣ ಆಗುತ್ತಿದೆ ಮತ್ತು ಇದರಿಂದ ದೇಶಕ್ಕೆ ಆರ್ಥಿಕತೆ ಬೆಳವಣಿಗೆಗೂ ಅನುಕೂಲ ಆಗಿದೆ, ಅಲ್ಪ ಪ್ರಮಾಣದಲ್ಲಿ ಪರಿಸರ ಸಂರಕ್ಷಣೆಯೂ ಆಗಿದೆ.
- ಎಥೆನಾಲ್‌ನಿಂದ ಸಾಕಷ್ಟು ಉಪಯೋಗಗಳಿದ್ದರೂ, ಕೇಂದ್ರ ಸರ್ಕಾರದ ನೀತಿಗಳು ಪೂರಕವಾಗಿಲ್ಲ ಎಥೆನಾಲ್ ಉತ್ಪಾದನೆಗಾಗಿ ಸರ್ಕಾರ ಹಲವು ಷರತ್ತುಗಳನ್ನು ವಿಧಿಸಿದೆ ಇದರ ಪರಿಣಾಮ ಸಕ್ಕರೆ ಕಾರ್ಖಾನೆಗಳ ಮೇಲಾಗಿದೆ ಹೆಚ್ಚುತ್ತಿರುವ ಕಬ್ಬಿನ ದರವನ್ನು ಸರಿದೂಗಿಸಲು ಪ್ರಯಾಸಪಡುತ್ತಿರುವ ಸಕ್ಕರೆ ಕಾರ್ಖಾನೆಗಳು ಸಂಕಷ್ಟದಲ್ಲಿವೆ ದೇಶದ ಅರ್ಥವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಎಥೆನಾಲ್ ಉತ್ಪಾದನೆಗೆ ಕೇಂದ್ರ ಸರ್ಕಾರವು ಷರತ್ತುರಹಿತ ಅನುಮತಿ ನೀಡಬೇಕಾಗಿದೆ.

## ❖ ಆರು ಕ್ರೀಡಾಂಗಣಗಳಿಗೆ ಎನ್‌ಜಿಟಿ ನೋಟಿಸ್

**ಸಂದರ್ಭ: ಪಿಚ್ ಮತ್ತು ಮೈದಾನದ ನಿರ್ವಹಣೆಗೆ ಬಳಸುತ್ತಿರುವ ನೀರಿನ ಮೂಲ ಕುರಿತ ಮಾಹಿತಿಯನ್ನು ಬಹಿರಂಗಪಡಿಸಲು ವಿಫಲವಾದ ಕಾರಣಕ್ಕಾಗಿ ಕ್ರೀಡಾಂಗಣದಲ್ಲಿನ ಎಲ್ಲ ಚಟುವಟಿಕೆಗಳಿಗೆಏಕೆ ನಿಷೇಧ ಹೇರಬಾರದು ಎಂದು ಇಲ್ಲಿನ ಅರುಣ್ ಜೇಟ್ಲಿ, ಕ್ರೀಡಾಂಗಣವೂ ಸೇರಿದಂತೆ ದೇಶದ ಒಟ್ಟು ಆರು ಕ್ರೀಡಾಂಗಣಗಳಿಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ನೋಟಿಸ್ ಜಾರಿಗೊಳಿಸಿದೆ.**

- ದೇಶದ ಏಳು ಕ್ರೀಡಾಂಗಣಗಳಲ್ಲಿ ಪಿಚ್ ನಿರ್ವಹಣೆಗೆ ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ಸಂಸ್ಕರಿಸಿದ ನೀರನ್ನು ಬಳಸುವ ಬದಲಿಗೆ ಅಂತರ್ಜಲವನ್ನೇ ಬಳಕೆ ಮಾಡಲಾಗುತ್ತಿದೆ. ಜತೆಗೆ ಮಳೆ ನೀರು ಸಂಗ್ರಹ ವ್ಯವಸ್ಥೆ ಯನ್ನೂ ಅಳವಡಿಸಲಾಗಿಲ್ಲ ಎಂದು ಆರೋಪಿಸಿ ಸಲ್ಲಿಕೆ ಯಾಗಿರುವ ಅರ್ಜಿ ಎನ್‌ಜಿಟಿ ವಿಚಾರಣೆ ನಡೆಸುತ್ತಿದೆ.
- ಇದಕ್ಕೆ ಸಂಬಂಧಿಸಿದಂತೆ ಕ್ರೀಡಾಂಗಣದಲ್ಲಿ ಬಳಸುತ್ತಿರುವ ನೀರಿನ ಮೂಲದ ಬಗ್ಗೆ ಮಾಹಿತಿ ಸಲ್ಲಿಸುವಂತೆಯೂ ಈ ಹಿಂದೆಯೇ ನಿರ್ದೇಶಿಸಲಾಗಿದೆ.
- ಹೈದರಾಬಾದ್‌ನ ಕ್ರೀಡಾಂಗಣದ ಆಡಳಿತವು ಪ್ರತಿಕ್ರಿಯೆ ಸಲ್ಲಿಸಲು ಮೂರು ವಾರಗಳ ಕಾಲಾವಕಾಶ ಕೋರಿದ್ದು. ಉಳಿದ ಆರು ಕ್ರೀಡಾಂಗಣಗಳ ಆಡಳಿತದಿಂದ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂಬುದನ್ನು ಎನ್‌ಜಿಟಿ ಪೀಠ ಗಮನಿಸಿ, ಈಗ ನೋಟಿಸ್ ಜಾರಿಗೊಳಿಸಿದೆ.
- ನೋಟಿಸ್ ಪಡೆದಿರುವ ಕ್ರೀಡಾಂಗಣಗಳ ಪೈಕಿ ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣ, ರಾಯಪುರದ ಶಾಹಿದ್ ವೀರ ನಾರಾಯಣ ಸಿಂಗ್ ಅಂತರರಾಷ್ಟ್ರೀಯ ಕ್ರೀಡಾಂಗಣ, ಜೈಪುರದ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣ, ಮುಂಬೈನ ಡಾ.ಡಿ.ವೈ. ಪಾಟೀಲ್ ಕ್ರೀಡಾಂಗಣ, ಲಖನೌನ ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ ಮತ್ತು ಒಡಿಶಾದ ಬಾರಾಬತಿ ಕ್ರೀಡಾಂಗಣವೂ ಸೇರಿವೆ.

## ❖ ಜೂನಿಯರ್ ವಿಶ್ವಕಪ್ ಶೂಟಿಂಗ್: ಪ್ರಾಚಿಗೆ ಚಿನ್ನ, ಪ್ರಣವ್‌ಗೆ ಕಂಚು

**ಸಂದರ್ಭ: ಭಾರತದ ಪ್ರಾಚಿ ಗಾಯಕವಾಡ್ ಅವರು ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಟೂರ್ನಿಯ ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಪುರುಷರ 10 ಮೀ. ಏರ್ ರೈಫಲ್‌ನಲ್ಲಿ ನಾರಾಯಣ್ ಪುಣವ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.**


ಪ್ರಾಚಿ ಗಾಯಕವಾಡ್

- ಭಾರತಕ್ಕೆ ಇದು ಎರಡನೆ ಚಿನ್ನ ಟೂರ್ನಿಯ ಮೊದಲ ದಿನ ಪುರುಷರ 10 ಮೀ ಏರ್ ಪಿಸ್ತೂಲ್‌ನಲ್ಲಿ ಚಿನ್ನ ಗೆದ್ದುಕೊಂಡಿದ್ದರು. ಭಾರತ ಎರಡು ಚಿನ್ನಗಳ ಜೊತೆ ನಾಲ್ಕು ಬೆಳ್ಳಿ ಮತ್ತು ಮೂರು ಕಂಚಿನ ಪದಕ ಗಳಿಸಿದೆ.
- ಪ್ರಾಚಿ ಫೈನಲ್‌ನಲ್ಲಿ 354.6 ಸ್ಕೋರ್ ಗಳಿಸಿ, ತಟಸ್ಥ ತಂಡದ ಸ್ಪರ್ಧಿ ದರ್ಯಾ ಚುಪ್ರಿಸ್ (354.4) ಅವರನ್ನು ಎರಡನೇ ಸ್ಥಾನಕ್ಕೆ ಸರಿಸಿದರು ತಟಸ್ಥ ತಂಡದ ಎಲಿನಾ ಕೃಟಿನಿನಾ (343.3) ಕಂಚಿನ ಪದಕ ಗಳಿಸಿದರು. ಪ್ರಾಚಿ ಫೈನಲ್ ಸುತ್ತಿಗೆ ಏರಿದ್ದ ಭಾರತದ ಏಕೈಕ ಶೂಟರ್ ಆಗಿದ್ದರು. ಅರ್ಹತಾ ಸುತ್ತಿನಲ್ಲಿ 578 ಸ್ಕೋನೊಡನೆ ಆರನೇ ಸ್ಥಾನ ಗಳಿಸಿದ್ದರು.
- ಜೂನಿಯರ್ ಪುರುಷರ 10 ಮೀ ಏರ್ ರೈಫಲ್‌ನಲ್ಲಿ ಭಾರತದ ಮೂವರು ಅಂತಿಮ ಸುತ್ತಿಗೆ ತಲುಪಿದ್ದರು. ನಾರಾಯಣ್ ಅವರು 630.9 ಸ್ಕೋರ್‌ನೊಡನೆ ಮೂರನೇ ಸ್ಥಾನ ಗಳಿಸಿದ್ದರು. ಅಭಿನವ್ ನಾಲ್ಕನೇ ಸ್ಥಾನ ಮತ್ತು ದಿವ್ಯಾಂಶು ದೇವಾಂಗನ್ ಏಳನೇ ಸ್ಥಾನ ಪಡೆದು ಅಂತಿಮ ಸುತ್ತಿಗೆ ಅರ್ಹತೆ ಪಡೆದಿದ್ದರು ಫೈನಲ್‌ನಲ್ಲಿ ನರೇನ್ (229.5) ಮೂರನೇ ಸ್ಥಾನ ಪಡೆದರು. ಸೊಖಿಬೊವ್ (251.2) ಮೊದಲನೇ ಮತ್ತು ಸೊಪೊಕ್ಸಿಯಸ್ (250 2) ಎರಡನೇ ಸ್ಥಾನ ಗಳಿಸಿದರು.

-------------------------------------------ಶುಭವಂದನೆಗಳು-------------------------------------------

Dr. Rajkumar IAS/KAS Academy